ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೫, ಸಂಚಿಕೆ ೬, ನವೆಂಬರ್ ೨೦೧೭

ಬಾರಿಸಲೆಷ್ಟೋ ಡಿಂಡಿಮವ ಕನ್ನಡ ನುಡಿಯೋ ಕನ್ನಡಿಗ ...

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೨

ಸಿಡ್ನಿ ವರದಿ ... ಪು. ೩

ಚಿಲುಮೆಯ ಒಳಗೆ

ನಿಜ ಮತ್ತು ಸುಳ್ಳು - ಕಥೆ ... ಪು. ೬

ಮಂಕುತಿಮ್ಮನ ಕಗ್ಗ ... ಪು. ೧೦

ಚಿಲುಮೆಯ ಒಳಗೆ

ರಾಂ ರಾಮ ... ಪು. ೧೧

ಕಥಾಚಿಲುಮೆ, ರೆಸಿಪಿ, ಕಾವ್ಯ ... ಪು. ೧೩

ಚಿಲುಮೆಯ ಒಳಗೆ

ಪದಪುಂಜ ... ಪು. ೧೫

ಚಿಲುಮೆಯ ಒಳಗೆ

ನೀವು ಮಾಡಿ ... ಪು. ೨೩

ಕಥೆಯಾದವನು – ಕೊನೆಯ ಭಾಗ

ಪು. ೧೪

ಓದುಗರ ಪತ್ರ – ಪುಟ ೪



ಮತ್ತೊಮ್ಮೆ ನವೆಂಬರ್ ಬಂದು ಹೋಗಿದೆ. ಜನರ ಮನದಲ್ಲಿ, ಇದು "ಕನ್ನಡದ ತಿಂಗಳು" ಎಂದು ನೆನಪಿಸಿ, ಒಂದಷ್ಟು ಕನ್ನಡಪರ ಕಾರ್ಯಕ್ರಮಗಳನ್ನು ಮಾಡಿಸಲು ಪ್ರೇರೇಪಿಸಿದೆ. ಅಷ್ಟರ ಮಟ್ಟಿಗೆ ಕನ್ನಡ ಮತ್ತು ನವೆಂಬರ್ ತಿಂಗಳ ನಂಟು ಎದ್ದು ತೋರುವುದರಲ್ಲಿ ಸೋಲುವುದಿಲ್ಲ. ವರುಷಕ್ಕೊಮ್ಮೆ ನೆನೆಪಿಸಿಕೊಂಡು ಮಾಡುವ ಹುಟ್ಟುಹಬ್ಬದ ಸಂಭ್ರಮದಂತೆ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸುವುದರಲ್ಲಿ ಹಿಂದೆ ಬೀಳದ ನಮ್ಮನ್ನು ನಾವೇ ಬೆನ್ನುತಟ್ಟಿಕೊಳ್ಳಬೇಕು. ಇದು ಖಂಡಿತ ಕೊಂಕಿನ ಮಾತಲ್ಲ. ಸಂಭ್ರಮದ ವಿಷಯಕ್ಕೆ ಪ್ರೋತ್ಸಾಹವು ಸದಾ ಇರಬೇಕಾದದ್ದೆ.

ನಾಡು, ನುಡಿ, ಸಂಸ್ಕೃತಿ, ನಮ್ಮಲ್ಲಿ ಎಷ್ಟು ತೀವ್ರತರವಾದ ತುಡಿತ ತರಬೇಕೆಂದರೆ ಅದನ್ನು ಹೋಲಿಸಲು ಯಾವ ಉಪಮೆಯೂ ಸಿಗಬಾರದು. ಆಗ ನಾವು ಉಸಿರಾಡುವುದನ್ನು ಎಷ್ಟು ಸಹಜ ಕ್ರಿಯೆಯೆಂದು ಅನುಭವಿಸುತ್ತೇವೆಯೋ, ಅಂತಹ ಒಂದು ಲಯವನ್ನು ನಮ್ಮ ಭಾಷೆಯ ಅಭಿಮಾನದಲ್ಲೂ ಕಾಣುವಂತಾಗುತ್ತದೆ. ಆಗ ನಮಗೆ ಭಾಷಾ ಪ್ರೇಮದ ಬಗ್ಗೆ ಮತ್ತೊಬ್ಬರು ಹೇಳುವ ಅವಶ್ಯಕತೆಯೇ ಬರುವುದಿಲ್ಲ.

ಈಗಿನ ತಲೆಮಾರಿನವರಲ್ಲಿ, ಯುವಪೀಳಿಗೆಯಲ್ಲಿ ಕನ್ನಡ ಭಾಷೆಯ ಬಗ್ಗೆ ಪ್ರೀತಿಯು ಕಡಿಮೆಯಾಗಿದೆ ಅಥವಾ ನಶಿಸಿಹೋಗುತ್ತಿದೆ ಎಂದು ಅಲ್ಲಲ್ಲಿ ಮಾತನಾಡಿಕೊಳ್ಳುವುದನ್ನು ನಾವು ಕೇಳಿರಬಹುದು. ಇದು ನಿಜವೂ ಸಹ. ಇದರ ಬಗ್ಗೆ ಹೊರನಾಡ ಚಿಲುಮೆಯಲ್ಲೇ ಸಾಕಷ್ಟು ಬಾರಿ ಪ್ರಸ್ತಾಪಿಸಿದ್ದಿದೆ. ಹಾಗೆಂದು ಬೇಸರ ಮಾಡಿಕೊಂಡು ಕೊರಗುವುದರಿಂದ ಪ್ರಯೋಜನವೇನೂ ಆಗದು. ಈಗಿನ ತಲೆಮಾರನ್ನು, ಅಥವಾ ಯುವಪೀಳಿಗೆಯನ್ನು ಬೊಟ್ಟು ಮಾಡುವುದಕ್ಕೆ ಮೊದಲು, ನಾವು ಕನ್ನಡವೆಂಬ ತುಡಿತವನ್ನು ಎಷ್ಟರಮಟ್ಟಿಗೆ ಜೀವಂತವಾಗಿ ಇಟ್ಟುಕೊಂಡಿದ್ದೀವಿ ಎಂದು ಪ್ರಶ್ನಿಸಿಕೊಳ್ಳುವುದು ಆದ್ಯತೆಯಾಗಬೇಕು. ನಾವು ಕನ್ನಡವನ್ನು ಎಲ್ಲೆಲ್ಲಿ ಬಳಸುವುದನ್ನು ನಿಲ್ಲಿಸಿದ್ದೀವಿ, ಎಲ್ಲೆಲ್ಲಿ ಬಳಸಿ ನಮ್ಮ ಭಾಷೆಯ ಕಂಪನ್ನು ಹರಡಬಹುದು ಎಂಬ ಒಂದು ಸಣ್ಣ ಆಲೋಚನೆ ಮಾಡುವುದರ ಮೂಲಕ ಸ್ವವಿಮರ್ಶೆ ಮಾಡಿಕೊಳ್ಳಬಹುದು. ಹುಟ್ಟು ಹಬ್ಬದ ಶುಭಾಶಯವೇ "ಹ್ಯಾಪಿ ಬರ್ತ್ ಡೇ" ಆಗಿಹೋಗಿರುವಾಗ, ಬಲವಂತದಿಂದ ಭಾಷಾ ಪ್ರೇಮವನ್ನು ತರಲು ಸಾಧ್ಯವಿಲ್ಲ. ಆದರೆ ಹೆಚ್ಚು ಹೆಚ್ಚು ಕನ್ನಡವನ್ನು ನಾವು ಬಳಸುತ್ತ ಇತರರಿಗೆ ಸ್ಫೂರ್ತಿಯ ಚಿಲುಮೆಯಾದರೆ ಮಾತ್ರ ನಮ್ಮ ಸುತ್ತಮುತ್ತಲು ಕನ್ನಡ ನುಡಿಯೆಂಬ ಹೂವುಗಳು ಅರಳಿ, ಎಲ್ಲರ ಮನಕ್ಕೆ ಮುದ ನೀಡುತ್ತದೆ. ಇಲ್ಲದಿದ್ದರೆ, ಕರ್ನಾಟಕದ ಹೃದಯಶಿವ ಎಷ್ಟು ಬಾರಿ ಡಮರುಗ ಡಿಂಡಿಮಿಸಿದರೂ, ನಾವುಗಳು ಎದ್ದೇಳುವುದಿಲ್ಲ.

ಸಾಲಿ ರಾಮಚಂದ್ರರಾಯರ ಈ ನುಡಿಗಳು ನಮಗೆ, ಕನ್ನಡವನ್ನು ಬಳಸುವ ಸ್ಫೂರ್ತಿಸೆಲೆಯ ಹೊನಲನ್ನೇ ಒದಗಿಸಲಿ ಎಂದು ಆಶಿಸುತ್ತಾ, ಓದುಗರೆಲ್ಲರಿಗೂ ರಾಜ್ಯೋತ್ಸವದ ಶುಭ ಹಾರೈಕೆಗಳನ್ನು ಸಲ್ಲಿಸುತ್ತಿದ್ದೇವೆ.

ಕನ್ನಡದ ನೆಲದ ಪುಲ್ಲೆನಗೆ ಪಾವನ ತುಲಸಿ |
ಕನ್ನಡದ ನೆಲದ ನೀರ್ವೊನಲೆನಗೆ ಜೀವನದಿ
ಕನ್ನಡದ ನೆಲದ ಕಲ್ಲೆನಗೆ ಸಾಲಿಗ್ರಾಮ ಶಿಲೆ
ಕನ್ನಡವೆ ದೈವಮ್ಮೆ ಕನ್ನಡ ಶಬ್ದಮೆನಗೋಂಕಾರಮೀಯೆನ್ನ |
ಕನ್ನಡದ ನುಡಿಯೆ ಗಾಯತ್ರಿಯದ್ಭುತ ಮಂತ್ರ
ಮಿನ್ನಾವುದೈಪೆರೆತು ಕನ್ನಡದ
ಸೇವೆಯಿಂದಧಿಕಮೀಜಗದೊಳೆನಗೆ? ▪

ಕನ್ನಡ ಚಿನ್ನವೆ ಅದು ಸರಿಯಣ್ಣ, ಕನ್ನಡಕ್ಕೇತಕೆ ಇತಿಮಿತಿಯು

ಪು.ತಿ.ನ. ನೆನಪು

ಭರತ ಭೂಮಿಯು ಸಾಧಕರ ಆಗರ. ನಿತ್ಯ ಸಾಧನೆಯ ಹಿಂದೆ ಗುರುವಿನ ಮಾರ್ಗದರ್ಶನ, ಅನುಗ್ರಹ, ಮೂಲ ವಿಷಯಗಳ ತಿಳಿಸಿಕೊಡುವಿಕೆ, ಸತತ ಅಭ್ಯಾಸಕ್ಕೆ ಪ್ರೇರಣೆ, ನಿರಂತರ ಶಿಕ್ಷಣ ಮತ್ತು ಅನುಭಾವಿಗಳ ಸಂಪರ್ಕ ಇವೆಲ್ಲ ಸದ್ಗುರುವಿನ ಲಕ್ಷಣ. ಅಂತಹ ಆಚಾರ್ಯ ಪರಂಪರೆಯ ತಾಣವು ಭಾರತದೇಶ. ಅಂತಹ ಸಾಧಕರಲ್ಲಿ ಒಬ್ಬರಾದ ವಿದುಷಿ ಶ್ರೀಮತಿ ಟಿ.ಎಸ್.ಸತ್ಯವತಿಯವರ ದರ್ಶನಭಾಗ್ಯ ಲಭಿಸಿದ್ದು ಅದೊಂದು ಸುದಿನ. ಸಿಡ್ನಿ ಸುಗಮ ಕನ್ನಡ ಶಾಲೆ ಹಾಗೂ ಸಿಡ್ನಿ ಸಂಸ್ಕೃತ ಸಮುದಾಯ ಶಾಲೆ ಇಂತಹ ಶ್ರೀಮಂತ ವಿದುಷಿಯ ವಾಕ್ ವೈಖರಿಯ ರಸದೌತಣವನ್ನು ಉಣಬಡಿಸಿದ ಸುದಿನ. ಸಂಗೀತ, ಸಂಸ್ಕೃತ ಹಾಗೂ ಕಸ್ತೂರಿ ಕನ್ನಡ ಭಾಷೆಯಲ್ಲಿ ಮೇರು ಶಿಖರವಾದ ಶ್ರೀಮತಿ ಸತ್ಯವತಿಯವರು ಬಾಲ್ಯದಿಂದಲೇ ತಮ್ಮ ಕಲಾವೈಖರಿ ಹಾಗೂ ಭಾಷಾ ನೈಪುಣ್ಯತೆಯನ್ನು ವಿದ್ವತ್ ಸಭೆಗಳಲ್ಲಿ ಪ್ರದರ್ಶಿಸಿದ್ದಾರೆ. ಇವರು ಸಂಗೀತಾದಿ ಸಂಸ್ಕೃತ ಶಿಕ್ಷಣವನ್ನು ಹೆಸರಾಂತ ಗುರುಗಳಿಂದ ನಿರಂತರವಾಗಿ ಅಭ್ಯಾಸ ಮಾಡಿ ತಮ್ಮ ಪ್ರತಿಭೆಯನ್ನು ಸಿಡ್ನಿ ಮಹಾನಗರದ ಕಲಾ ಹಾಗೂ ಭಾಷಾ ಪ್ರೇಮಿಗಳಿಗೆ ರಸದೌತಣದಂತೆ ಉಣಬಡಿಸಿ ಜನಸ್ತೋಮವೆಲ್ಲ ಬೆರಗಾಗುವಂತೆ ಮಾಡಿದ್ದಾರೆ. ಹಲವಾರು ಬಿರುದುಗಳಿಗೆ ಪಾತ್ರರಾದ ಇವರು ಸಹೃದಯರು. ಕರ್ನಾಟ ದೇಶವು ಸಂಗೀತ ಪಿತಾಮಹಾ ಪುರಂದರದಾಸರಂತಹ ದಾಸಶ್ರೇಷ್ಠರ ನಾಡು. ಅಂತಹ ನಿಟ್ಟಿನಲ್ಲೇ ಬೆಳೆದು ಬಂದ ಹಲವಾರು ಕನ್ನಡ ರಸಋಷಿಗಳಲ್ಲೊಬ್ಬರಾದ ಪ್ರಖ್ಯಾತ ಕವಿ ಪು.ತಿ.ನರಸಿಂಹಾಚಾರ್ಯರ ಕೃತಿಗಳ ಆಮೂಲ ವಿಶ್ಲೇಷಣೆ ಪರಿಚಯದ ಕಾರ್ಯಕ್ರಮವು "ಖ್ಯಾತಕವಿ ಪು.ತಿ.ನ ನೆನಪು" ಎನ್ನುವ ಶೀರ್ಷಿಕೆಯಡಿಯಲ್ಲಿ ನಡೆಯಿತು. ಸಿಂತಸೈಥುರ್ ನಲ್ಲಿ ಶ್ರೀ.ಮೋಹನ್ ಅಯ್ಯರ್, ಶ್ರೀಮತಿ ಸತ್ಯವತಿ ಹಾಗೂ ಅವರ ಪುತ್ರ ಚಿ.ಶುಶ್ರುತ್ ತಮ್ಮ ಸುಶ್ರಾವ್ಯ ಗಾಯನದ ಮೂಲಕ ಕವಿ ಪು.ತಿ.ನ ರವರ ಕೃತಿಗಳ ಪರಿಚಯವನ್ನು ಮಾಡಿಕೊಡುತ್ತಾ ರಚನೆಯ ಹಿನ್ನೆಲೆ, ಕೃಷ್ಣಭಕ್ತಿ (ತಲ್ಲೀ) ಸಂಸ್ಕೃತ ಭೂಯಿಷ್ಠ ಕನ್ನಡ ಭಾಷೆಯ ಛಂದೋಬದ್ಧ ಪದಸಮುಚ್ಚಯದ ಪರಿಚಯ, ರಾಗ ಹಾಗೂ ತಾಳಗಳ ಲಯಬದ್ಧತೆಯು ರಚನೆಗೆ ಹೇಗೆ ಹೊಂದಿಕೊಂಡಿರಬೇಕು, ಕೃತಿಗಳನ್ನು, ಕಲಾವಿದ ಹಾಡುವಾಗ ಎಚ್ಚರ ವಹಿಸಬೇಕಾದ ವಿಷಯಗಳು, ಭಾವಪೂರ್ಣತೆ, ಅಂತರಂಗದ ಸುಪಕ್ವತೆ, ವಿಷಯವನ್ನು ತಿಳಿಸುವ ವಿಧಾನ, ನವಿರಾದ ಪದವಿನ್ಯಾಸಗಳಿಂದ ಗೂಢ ವಿಚಾರಗಳ ಪರಿಚಯ, ವಿಶೇಷವಾದ ಆರೋಹಣ, ಅವರೋಹಣದ ಶೈಲಿ, ಹೀಗೆ ಹಲವಾರು ವಿಷಯಗಳ ಆಗರವಾಗಿ ಶ್ರೀ ಪು.ತಿ.ನ ರವರ ಕೃತಿಗಳನ್ನು ಹಾಡಿ, ಗಾಯನ ಹಾಗೂ ವಿವರಣೆಗಳ ಮೂಲಕ ಕೇಳುಗರ ಮನದಂಗಳದಲ್ಲಿ ಕೃಷ್ಣನು ನಲಿಯುವಂತೆ ತಿಳಿಹೇಳಿದ ಘನತೆ ಶ್ರೀಮತಿ ಸತ್ಯವತಿಯವರದ್ದು.

ಸಂಗೀತ ಕಾವ್ಯ ಸಂಜೆಯ ಈ ಕಾರ್ಯಕ್ರಮ ಎರಡು ಗಂಟೆಗಳ ಕಾಲ ಸಿಂತಸೈಥುರ್ ಶ್ರೀ ಮೋಹನ್ ಅಯ್ಯರ್ ಹಾಗೂ ಚಿ.ಸುಮುಖ ಜಗದೀಶ ರವರ ಮೃದಂಗದಿಂದ ಕೂಡಿದ ಈ ಸಂಗೀತ ಕಾವ್ಯಮಯ ಸಂಜೆಯ ಕಾರ್ಯಕ್ರಮ ಕನ್ನಡ ಶಾಲೆಯ ಮುಖ್ಯಸ್ಥರಾದ ಶ್ರೀ ಕನಕಾಪುರ ನಾರಾಯಣ ಹಾಗೂ ಅವರ ಕಾರ್ಯಕಾರಿ ಸಮಿತಿಯ ಕೊಡುಗೆಯೆಂದೇ ಹೇಳಬಹುದು. "ಗಿರಿಧರ ಗೋಪಾಲ....." ಎಂಬ ಪ್ರಖ್ಯಾತ ಗಾನದಿಂದ ಮುಕ್ತಾಯಗೊಂಡ ಕಾರ್ಯಕ್ರಮ ಎಲ್ಲರನ್ನೂ ಖ್ಯಾತ ಕವಿಯ ನೆನಪನ್ನು ಹಸನುಗೊಳಿಸಿತು.

ಮುಂದಿನ ಪುಟ ನೋಡಿ ...

ಸುಭಾಷಿತದ ಮಹತ್ವ

ಸಂಸ್ಕೃತ ಕಾವ್ಯಗಳಲ್ಲಿ ಸುಭಾಷಿತದ ಸ್ಥಾನ ಅತ್ಯುನ್ನತ. ಹಲವಾರು ವಿಷಯಗಳನ್ನು, ಹಲವಾರು ಸ್ತರಗಳಲ್ಲಿರುವ ವ್ಯಕ್ತಿಗಳಿಗೆ ತಲುಪುವಂತೆ, ನಾಲ್ಕು ಸಾಲುಗಳಲ್ಲಿ ಶ್ಲೋಕದ ಶೈಲಿಯಲ್ಲಿ ಬರೆಯಲಾಗಿದೆ. ಮಹಾ ಆದಿಕಾವ್ಯವಾದ ರಾಮಾಯಣಾದಿಗಳಲ್ಲಿ ಹಲವಾರು ಸುಭಾಷಿತಗಳು ಮಾನವನ ಸರ್ವತೋಮುಖ ಅಭಿವೃದ್ಧಿಗಾಗಿಯೂ ತಿಳಿಸಿಕೊಡಲಾಗಿದೆ.

ಅಂತಹ ಸುಭಾಷಿತಗಳಲ್ಲಿ ಪಾರಂಗತರಾದ, ಹಲವಾರು ಬಿರುದಾಂಕಿತಗಳಿಂದ ಸುಶೋಭಿತರಾದ ವಿದುಷಿ ಶ್ರೀಮತಿ ಟಿ.ಎಸ್. ಸತ್ಯವತಿಯವರ ಕಾರ್ಯಕ್ರಮ "ಸುಭಾಷಿತಗಳ ಸಾರ" ಎಂಬ ಕಾರ್ಯಕ್ರಮ ಸಿಡ್ನಿ ಮಹಾನಗರದ ಪ್ರಪ್ರಥಮ ಸಂಸ್ಕೃತ ಸಮುದಾಯ ಶಾಲೆಯಾದ "ಸಿಡ್ನಿ ಸಂಸ್ಕೃತ ಶಾಲೆ" ಯಲ್ಲಿ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಶ್ರೀಮತಿ ಸತ್ಯವತಿಯವರು ಹಲವಾರು ಸಂಸ್ಕೃತ ಸುಭಾಷಿತಗಳ ಹಲವಾರು ಶ್ಲೋಕಗಳನ್ನು ವಿದ್ಯಾರ್ಥಿಗಳಿಗೆ ಹಾಗೂ ಪ್ರೇಕ್ಷಕರಿಗೆ ಪರಿಚಯ ಮಾಡಿಕೊಡುವುದರ ಮೂಲಕ ಅವರ ಆಳವಾದ ಅಧ್ಯಯನ ವಿಷಯ ಹಾಗೂ ಭಾಷೆಯ ಹತೋಟಿ, ಆಂಗ್ಲಭಾಷೆಯ ಸೌಷ್ಠವತೆ ಎಲ್ಲರನ್ನೂ ರಂಜಿಸಿತು.

ಸುಭಾಷಿತಗಳ ಮೂಲ ಉದ್ದೇಶ, ಸರಸತೆ, ನವಿರಾದ ಮಾತಿನಿಂದ ವಿಷಯವನ್ನು ತಲುಪುವಿಕೆ. ಈ ರೀತಿ ಹಲವಾರು ವಿಚಾರಗಳನ್ನು ಪರಿಚಯಿಸಿದರು. ಸಂಸ್ಕೃತ ಶಾಲೆಯ ಕಾರ್ಯಕಾರಿ ಸಮಿತಿಯ ವತಿಯಿಂದ ಹಾಗೂ ಸ್ಕೂಲ್ ಆಫ್ ವೇದಿಕ್ ಸೈನ್ಸಸ್ ಪರವಾಗಿ ಶ್ರೀಮತಿ ಸತ್ಯವತಿಯವರನ್ನು ಗೌರವಿಸಲಾಯಿತು.

ಇಂತಹ ಪ್ರತಿಭಾನ್ವಿತ ವಿದೂಷಿಯ ಮಾತುಗಳಿಂದ ಶಾಲೆಯ ಮಕ್ಕಳು, ಸಂಸ್ಕೃತ ಶಾಲೆಯ ಪರವಾಗಿ ಆಶೀರ್ವಾದವನ್ನು ಸಹಾ ಪಡೆದುಕೊಂಡರು. ಸಂಸ್ಕೃತ ಸಾಹಿತ್ಯಾದಿಗಳ ಮಹತ್ವವನ್ನು, ಅಗಾಧತೆಯನ್ನು ಅರಿತುಕೊಂಡರು. ▪

ಮತ್ತಷ್ಟು ಛಾಯಾಚಿತ್ರಗಳು
ಮುಂದಿನ ಪುಟದಲ್ಲಿ

ವಿದುಷಿ ಸತ್ಯವತಿಯವರ ಕಾರ್ಯಕ್ರಮದ ಛಾಯಾಚಿತ್ರಗಳು

ಬೆಂಗಳೂರಿನ ರಂಗ ಶಂಕರದಲ್ಲಿ 'ಬೆನಕ' ತಂಡದವರಿಂದ ಅಮೋಘವಾಗಿ ಪ್ರದರ್ಶನಗೊಂಡ ಮಹಾಕವಿ ರಾಘವಾಂಕನ ಪ್ರಸಿದ್ಧ ಕೃತಿ 'ಸತ್ಯ ಹರಿಶ್ಚಂದ್ರ ಕಾವ್ಯ' ನಾಟಕ ರೂಪವನ್ನು ನೋಡುವ ಭಾಗ್ಯ ನನ್ನದಾಗಿತ್ತು.

ಇತರ ಭಾಷೀಯರ ತಾಣವಾಗಿರುವ ಬೆಂಗಳೂರಿನಲ್ಲಿ ಕಸ್ತೂರಿ ಕನ್ನಡ ಇನ್ನೂ ನಿರಾತಂಕವಾಗಿ ಉಸಿರಾಡುತ್ತಿದೆ ಎಂಬ ಸಂದೇಶ ಮೇಲೆ ತಿಳಿಸಿದ ನಾಟಕ ಪ್ರದರ್ಶನ ಸಾಬೀತುಪಡಿಸಿದಂತಿತ್ತು.

ರಾಘವಾಂಕ ವೀರಶೈವ ಕವಿ. ಮಹಾ ಕವಿ ಹರಿ ಹರ ಇವನ ಕಾವ್ಯ ಗುರು. ಹರಿಶ್ಚಂದ್ರ ಕಾವ್ಯ, ಸಿದ್ಧರಾಮ ಪುರಾಣ, ಸೋಮನಾಥ ಚರಿತೆ, ವೀರೇಶ ಚರಿತೆ, ಶರಭ ಚಾರಿತ್ರ ಮತ್ತು ಹರಿಹರ ಮಹತ್ವ ರಾಘವಾಂಕನ ಮಹಾ ಕಾವ್ಯಗಳು.

ಹರಿಶ್ಚಂದ್ರಕಾವ್ಯ ರಾಘವಾಂಕನ ಕೃತಿಗಳಲ್ಲಿಯೇ ಶ್ರೇಷ್ಠವಾದುದು. ಈ ಕೃತಿ ಕನ್ನಡ ಸಾಹಿತ್ಯದಲ್ಲಿಯೇ ಅಪೂರ್ವವಾದ ಕೃತಿ. ಹಲವು ವಿದ್ವಾಂಸರ ಮೆಚ್ಚುಗೆಯ ಈ ಕಾವ್ಯ ಕನ್ನಡ ಸಾರಸ್ವತ ಲೋಕದಲ್ಲಿ ಅಮರ. ಸತ್ಯವೇ ದೇವರು ಎನ್ನುವ ತತ್ವವನ್ನು ಜೀವನಕ್ಕೆ ಅಳವಡಿಸಿ ಬದುಕಿದ ಸತ್ಯಸಾಧಕ ಹರಿಶ್ಚಂದ್ರನ ಕರುಣಾದ್ಭುತವಾದ ಕಥೆಯೇ ಹರಿಶ್ಚಂದ್ರಕಾವ್ಯ. ಇದರಲ್ಲಿ ಹದಿನಾಲ್ಕು ಸ್ಥರಗಳಿದ್ದು ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದೆ.

ಹರಿಶ್ಚಂದ್ರನ ಪಾತ್ರ ಸತ್ಯ ಸಾಕ್ಷಾತ್ಕಾರಕ್ಕಾಗಿ ನಿರಂತರವೂ ಹೋರಾಡುವ ಆದರ್ಶದ ಪ್ರತಿಮೆಯಾಗಿದೆ. ಈ ಕೃತಿಯಲ್ಲಿ ಕಂಡುಬರುವ ಶೈಲಿ ನಾಟ್ಯಮಯವಾದ ಸನ್ನಿವೇಶಗಳು, ಪಾತ್ರಗಳಲ್ಲಿ ಕಂಡುಬರುವ ವೈವಿಧ್ಯ , ಇವೆಲ್ಲವನ್ನೂ ವ್ಯಾಪಿಸಿರುವ ದರ್ಶನ ಇವುಗಳಿಂದ ಈ ಕೃತಿಯನ್ನು ರಾಘವಾಂಕನ ಮಹಾಕಾವ್ಯವೆಂದು ಹೇಳಬಹುದು.

ಹರಿಶ್ಚಂದ್ರ ಕಾವ್ಯ ನಿರೂಪಣೆ ಮತ್ತು ನಾಟಕೀಯತೆಗಳು ಅತ್ಯುತ್ತಮ ಮಟ್ಟದ್ದು. ರಾಘವಾಂಕನು ತನ್ನ ಈ ಕೃತಿಯಲ್ಲಿ ಸಂಸ್ಕೃತ ಮತ್ತು ನಡುಗನ್ನಡಗಳ ಬಹಳ ಪರಿಣಾಮಕಾರಿಯಾದ ಸಂಯೋಜನೆಯನ್ನು ಸಾಧಿಸಿದ್ದಾನೆ.

ಹರಿಶ್ಚಂದ್ರ, ಚಂದ್ರಮತಿ, ವಿಶ್ವಾಮಿತ್ರ, ನಕ್ಷತ್ರಕ, ವೀರಬಾಹುಕ ಮುಂತಾದ ಪಾತ್ರಗಳು ಕನ್ನಡ ಚೆನ್ನಾಗಿ ಬಲ್ಲ ಜನಮನಗಳಲ್ಲಿ ಬೇರೂರಿವೆ.

ವಿಶ್ವಾಮಿತ್ರ ಮತ್ತು ವಸಿಷ್ಠರ ಸಂಘರ್ಷ, ಹರಿಶ್ಚಂದ್ರ-ಹೊಲತಿಯರ ಸಂವಾದ, ಹರಿಶ್ಚಂದ್ರನ ರಾಜ್ಯತ್ಯಾಗ, ರೋಹಿತಾಶ್ವನ ಸಾವು, ಚಂದ್ರಮತಿಯ ಪ್ರಲಾಪ ಮುಂತಾದ ಪ್ರಸಂಗಗಳು ಕನ್ನಡ ಸಂಸ್ಕೃತಿಯಲ್ಲಿ ಹಲವು ಶತಮಾನಗಳಿಂದ ಅಚ್ಚಳಿಯದೆ ಉಳಿದಿವೆ.

ರಾಘವಾಂಕ ಹರಿಶ್ಚಂದ್ರಕಾವ್ಯವನ್ನು ರಚಿಸಿ ಪಂಪಾಪುರದ ದೇವರಾಜನ ಸಭೆಯಲ್ಲಿ ಓದಿ ರಾಜನ ಮತ್ತು ಇತರ ವಿದ್ವಾಂಸರ ಮೆಚ್ಚುಗೆಯನ್ನು ಪಡೆದಿದ್ದ. ರಾಜ ದೇವರಾಜ ಇವನಿಗೆ 'ಕವಿಶರಭಭೇರುಂಡ' ಬಿರುದನ್ನು ಕೊಟ್ಟು ಸನ್ಮಾನಿಸಿದ. ರಾಜಸಭೆಯಲ್ಲಿ ಹೀಗೆ ಮೆಚ್ಚುಗೊಂಡ ಹರಿಶ್ಚಂದ್ರಕಾವ್ಯವನ್ನು ರಾಘವಾಂಕ ಹೊನ್ನ ಹರಿವಾಣದಲ್ಲಿರಿಸಿ ತಂದು ತನ್ನ ಗುರುವು ಮಾವನೂ ಆದ ಹರಿಹರನ ಮುಂದಿರಿಸಿ ಅವನ ಆಶೀರ್ವಾದವನ್ನು ಬೇಡಿದ. ತನ್ನ ಶಿಷ್ಯ ರಾಘವಾಂಕ ನರಸ್ತುತಿ ಮಾಡಿದ ತಪ್ಪಿಗಾಗಿ ರಾಘವಾಂಕನ ಹಲ್ಲುಗಳನ್ನು ಮುರಿದ. ಅನಂತರ ರಾಘವಾಂಕ ಶೈವಕೃತಿಪಂಚಕಗಳನ್ನು ರಚಿಸಿ ಹರಿಹರನನ್ನು ಮೆಚ್ಚಿಸಿದ.

ಒಂದು ಉತ್ತಮ ನಾಟಕ ಪ್ರದರ್ಶನ ನೋಡಿದ್ದು ನನ್ನ ಮನಸ್ಸಿಗೆ ಸಂತಸ ತಂದಿತು. ರಾಘವಂಕನಂತಹ ಮತ್ತು ಇತರ ಮಹಾ ಕವಿಗಳ ಉತ್ತಮ ಪರಂಪರೆ ಇರುವ ಈ ನಮ್ಮ ಹೊನ್ನ ಕನ್ನಡ ಭಾಷೆಯ ಮೇಲೆ ಇನ್ನಷ್ಟು ಅಭಿಮಾನ ಉಕ್ಕಿಬಂದಿತು. ▪

ಓದಿ ಬರೆದ ಪತ್ರ

ಧನ್ಯವಾದಗಳು

ನಿಮ್ಮೆಲ್ಲರ ಉತ್ಸಾಹದ ಚಿಲುಮೆ
ಹೊರನಾಡ ಚಿಲುಮೆ,
ತಿಂಗಳು ತಿಂಗಳು
ಚಿಮ್ಮಿ ಚಿಮ್ಮಿ ಬರುತಿದೆ,
ನಲಿದು ನಲಿದು ಬರುತಿದೆ,
ಹೊಸತು ಹೊಸತು ತರುತಿದೆ.
ಹೊಸರುಚಿ ಹೊಸ ವಿಷಯ ಹೊಸತನ,
ತುಂಬಿ ತುಂಬಿ ತುಳುಕಿದೆ,
ಕನ್ನಡಿಗರ ಮನ ಅರಳಿದೆ,
ಸಮುದ್ರದಾಚೆ ಇಣುಕಿದೆ.
ಏರಲಿ ಏರಲಿ ಎತ್ತರೆತ್ತರಕ್ಕೆ,
ಹೊರನಾಡ ಚಿಲುಮೆಯ ಬುಗ್ಗೆ.
ಹರಡಲಿ ಕನ್ನಡದ ಕಂಪು ಎಲ್ಲ ಕಡೆಗೆ.

ಗಣೇಶ ಕುಮಾರ್
ಅಬ್ಬಿಗೆರೆ, ಬೆಂಗಳೂರು.

ನಾವು ಆಡುವ ಮಾತು ಹೇಗಿರಬೇಕು ಎಂದು ಮನುಸ್ಮೃತಿಯಲ್ಲಿ ಕೆಲವು ಕಡೆ ವಿವರಿಸಲಾಗಿದೆ. ಅವುಗಳಲ್ಲಿ ಒಂದು ಶ್ಲೋಕ (ಅಧ್ಯಾಯ 4, ಶ್ಲೋಕ 138) ಈ ರೀತಿ ಇದೆ:

ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ನ ಬ್ರೂಯಾತ್ ಸತ್ಯಮಪ್ರಿಯಂ |
ಪ್ರಿಯಂ ಚ ನಾನೃತಂ ಬ್ರೂಯಾತ್ ಏಷ ಧರ್ಮಃ ಸನಾತನಃ ||

ಎಂದರೆ: ಕೇಳುವುದಕ್ಕೆ ಹಿತವಾಗಿರುವ ಸತ್ಯವನ್ನು ನುಡಿಯಬೇಕು; ಅಪ್ರಿಯವಾದ ಸತ್ಯವನ್ನು ಹೇಳಕೂಡದು; ಕೇಳುವುದಕ್ಕೆ ಇಷ್ಟವಾಗಬಹುದು ಎಂದು ಸುಳ್ಳನ್ನು ಹೇಳಕೂಡದು. ಇದೇ ಸನಾತನ ಧರ್ಮ.

ಈ ಮೂರು ನೀತಿಗಳಲ್ಲಿ ಮೊದಲನೆಯದಾದ **ಕೇಳುವುದಕ್ಕೆ ಹಿತವಾಗಿರುವ ಸತ್ಯವನ್ನು ನುಡಿಯಬೇಕು** ಎಂಬುದನ್ನು ಪಾಲಿಸುವುದು ಸುಲಭ. ಉದಾಹರಣೆಗೆ "ನಿನಗೆ ಪಾಸ್ ಆಯಿತು", "ಅವನಿಗೆ ಕೆಲಸ ಸಿಕ್ಕಿತು" ಎಂಬ ಸುದ್ದಿಗಳನ್ನು ಎಲ್ಲರೂ ಹೇಳಲು ಉತ್ಸುಕರಾಗಿರುತ್ತಾರೆ. ಕೇಳುವವರಿಗೂ ಇವು ಇಷ್ಟವಾಗುತ್ತವೆ. ಈ ವಿಷಯದಲ್ಲಿ ಹೆಚ್ಚಿನ ಚರ್ಚೆ ಅನಗತ್ಯ.

ಆದರೆ "**ಅಪ್ರಿಯವಾದ ಸತ್ಯವನ್ನು ಹೇಳಕೂಡದು**" ಎಂಬ ನಿಯಮವನ್ನು ಅನುಸರಿಸುವುದು ಕಷ್ಟ. ಈ ನಿಯಮದ ಒಂದು ಉದ್ದೇಶ ಅಂತಹ ಸತ್ಯದಿಂದ ಕೇಳುವವರಿಗೆ ನೋವಾಗಬಹುದು ಎಂದು. ಆದರೆ ಕೇಳುವವರು ತಮ್ಮ ತಪ್ಪನ್ನು ತಿದ್ದಿಕೊಂಡು ಉತ್ತಮರಾಗಲಿ ಅಥವಾ ಮುಂಬರುವ ಕಷ್ಟಕ್ಕೆ ಸಿದ್ಧರಾಗಿರಲಿ ಎಂಬ ಕಾರಣಗಳಿಂದ ಅನೇಕ ವೇಳೆ ಅಪ್ರಿಯವಾದ ಸತ್ಯವನ್ನು ನುಡಿಯಬೇಕಾಗುತ್ತದೆ. ವೈದ್ಯರು, ನ್ಯಾಯಾಧೀಶರು, ಉಪಾಧ್ಯಾಯರು ಮುಂತಾದವರಿಗಂತೂ ಅಪ್ರಿಯವಾದ ಸತ್ಯವನ್ನು ನುಡಿಯಬೇಕಾದ ಸನ್ನಿವೇಶಗಳು ಅನಿವಾರ್ಯವೇ ಸರಿ.

ಈ ಎರಡನೆಯ ನಿಯಮವನ್ನು ಒಂದು ಕಥೆಯ ಹಿನ್ನೆಲೆಯಲ್ಲಿ ಚರ್ಚಿಸಬಹುದು. ಈ ಕಥೆಗೆ ಆಧಾರ ಕೋಲಾರದ ಕೃಷ್ಣ ಅಯ್ಯರ್ ಅವರು ಬರೆದ Wonderful Stories for Children ಎಂಬ ಸಂಕಲನದ ಒಂದು ಕಥೆ.

ಕೋಲಾರ ಜಿಲ್ಲೆಯಲ್ಲಿ ಶಿಲ್ಲಂಗೆರೆ ಎಂಬ ಊರಿದೆ. ಬಹಳ ಕಾಲದ ಹಿಂದೆ ಅಲ್ಲಿ ಬಂಗಾರಯ್ಯ ಎಂಬ ವರ್ತಕನು ವಾಸಿಸುತ್ತಿದ್ದನು. ಒಂದು ರಾತ್ರಿ ಕಳ್ಳನೊಬ್ಬ ಅವನ ಮನೆಗೆ ನುಗ್ಗಿ ಚೂರಿಯನ್ನು ತೋರಿಸುತ್ತ ಬಂಗಾರಯ್ಯ ಮತ್ತು ಅವನ್ ಹೆಂಡತಿಯನ್ನು ಕುರಿತು "ನಿಮ್ಮ ಹಣ ಮತ್ತು ಒಡವೆಗಳನ್ನು ಎಲ್ಲಿ ಬಚ್ಚಿಟ್ಟಿರುವಿರಿ ಎಂದು ಹೇಳಿರಿ. ಇಲ್ಲದಿದ್ದರೆ ನಿಮ್ಮಿಬ್ಬರನ್ನೂ ಈಗಲೇ ಕೊಲ್ಲುವೆನು" ಎಂದು ಬೆದರಿಸಿದನು. ದಂಪತಿಗಳಿಬ್ಬರೂ ತಮ್ಮ ಮನೆಯಲ್ಲಿ ಯಾವುದೇ ಬೆಲೆ ಬಾಳುವ ವಸ್ತುವಿಲ್ಲವೆಂದು ಪದೇಪದೇ ಹೇಳಿದರು. ಕಳ್ಳನ ಬೆದರಿಕೆ ಇನ್ನೂ ಹೆಚ್ಚಾಗುತ್ತ ಬಂದಿತು. ಈ ಗದ್ದಲದಿಂದ ಅವರ ಚಿಕ್ಕ ಮಗನಿಗೆ ಎಚ್ಚರವಾಯಿತು. ಅವನು ಕಳ್ಳನು ತನ್ನ ತಂದೆತಾಯಿಯರನ್ನು ಕೊಂದೇ ಬಿಡುವನೆಂದು ಹೆದರಿ ಕಳ್ಳನಿಗೆ ತಮ್ಮ ತಿಜೋರಿಯನ್ನು ತೋರಿಸಿ ಅದರ ಬೀಗದ ಕೈಯನ್ನೂ ಕೊಟ್ಟುಬಿಟ್ಟನು. ತಿಜೋರಿಯನ್ನು ತೆಗೆದಾಗ ಅದರಲ್ಲಿ 50 ಬಂಗಾರದ ನಾಣ್ಯಗಳ ವಿನಾ ಬೇರೆ ಏನೂ ಇರಲಿಲ್ಲ. ಕಳ್ಳನಿಗೆ ಬಾಲಕನ ಪ್ರಾಮಾಣಿಕತೆಯನ್ನು ಕಂಡು ಆಶ್ಚರ್ಯವಾಗಿ ಅವನನ್ನು ಕೇಳಿದನು:"ನಿನ್ನ ತಂದೆತಾಯಿಯರು ನಿರಾಕರಿಸಿದರೂ ನೀನು ನಿಜವನ್ನೇ ಹೇಳಿದೆ. ಇದಕ್ಕೇನು ಕಾರಣ?" ಹುಡುಗನು ಉತ್ತರಿಸಿದನು: "ನನಗೆ ನಿಜ ಮತ್ತು ಸುಳ್ಳಿನ ಬೆಲೆ ತಿಳಿದಿದೆ ಅವರಿಗೆ ತಿಳಿದಿಲ್ಲ". ಕಳ್ಳನು "ಏನು ಅವುಗಳ ಬೆಲೆ? ನನಗೂ ತಿಳಿಸು" ಎಂದು ಕೇಳಲು, ಹುಡುಗನು "ನಾನು ನಿಜ ಹೇಳಿದ್ದರಿಂದ ನನ್ನ ತಂದೆತಾಯಿಗಳು ಉಳಿದುಕೊಂಡರು, ನಾನೂ ಅವರಂತೆ ಸುಳ್ಳು ಹೇಳಿದ್ದರೆ, ಅವರಿಬ್ಬರನ್ನೂ ಕಳೆದುಕೊಂಡು ಅನಾಥನಾಗುತ್ತಿದ್ದೆ" ಎಂದು ಉತ್ತರಿಸಿದನು. ಕಳ್ಳನಿಗೆ ಈ ಉತ್ತರದಿಂದ ಸಂತೋಷವಾಗಿ ಬಂಗಾರದ ನಾಣ್ಯಗಳನ್ನು ಮುಟ್ಟದೆ ಹಿಂತಿರುಗಿಹೋದನು.

ಈ ಕಥೆಯ ಪ್ರಕಾರ ಸತ್ಯವು ತಂದೆತಾಯಿಗಳಿಗೆ ಅಪ್ರಿಯವಾಗಿದ್ದರೂ ಅವರ ಜೀವವನ್ನೇ ಉಳಿಸಿತಲ್ಲವೇ?

ಎಷ್ಟೇ ಆದರೂ ಕೇಳುವುದಕ್ಕೆ ಹಿತವಲ್ಲದ ಸತ್ಯಗಳನ್ನು ಹೇಳುವುದು ಕಷ್ಟ ಎಂಬುದರಲ್ಲಿ ಸಂದೇಹವಿಲ್ಲ. ಈ ವಿಷಯದಲ್ಲಿ ವಾಲ್ಮೀಕಿ ರಾಮಾಯಣದ ಒಂದು ಸಂದರ್ಭ ನೆನಪಿಗೆ ಬರುತ್ತದೆ. ಸೀತೆಯನ್ನು ಅಪಹರಿಸುವುದಕ್ಕೆ ನಿನ್ನ ಸಹಾಯ ಅಗತ್ಯ ಎಂದು ರಾವಣನು ಮಾರೀಚನನ್ನು ಕಾಡುತ್ತಾನೆ. ಮಾರೀಚನು ಹಾಗೆ ಮಾಡುವುದು ತಪ್ಪೆಂದೂ, ಸೀತಾಪಹರಣದಿಂದ ರಾವಾಣನಿಗೆ ಯಾವ ಶ್ರೇಯಸ್ಸೂ ಉಂಟಾಗಲಾರದೆಂದೂ ವಿಧವಿಧವಾಗಿ ಬೋಧಿಸುತ್ತಾನೆ. ಆದರೆ ರಾವಣನು ಮಾರೀಚನ ಯಾವ ಮಾತಿಗೂ ಕಿವಿಗೊಡುವುದಿಲ್ಲ. ಆಗ ಮಾರೀಚನು ಹೀಗೆ ನುಡಿಯುತ್ತಾನೆ: (ಅರಣ್ಯಕಾಂಡ, 35 – 2)

ಮುಂದಿನ ಪುಟ ನೋಡಿ ...

ಸುಲಭಾಃ ಪುರುಷಾಃ ರಾಜನ್ ಸತತಂ ಪ್ರಿಯವಾದಿನಃ |
ಅಪ್ರಿಯಸ್ಯ ತು ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಾಃ ||

ಮಹಾರಾಜ! ಯಾವಾಗಲೂ (ಪ್ರಭುವಿಗೆ) ಪ್ರಿಯವಾದುದನ್ನೇ ಮಾತನಾಡುವವರು ಬೇಕಾದಷ್ಟು ಮಂದಿ. ಆದರೆ ಕೇಳುವುದಕ್ಕೆ ಇಷ್ಟವಾಗದೆ ಇರಬಹುದಾದರೂ, ನಮಗೆ ಶ್ರೇಯಸ್ಕರವಾದ ಮಾತನ್ನು ಆಡುವವರೂ ಅಪರೂಪ, ಕೇಳುವವರೂ ಅಪರೂಪ.

ಇನ್ನು ಮೂರನೆಯ ನೀತಿ: "**ಕೇಳುವುದಕ್ಕೆ ಇಷ್ಟವಾಗಬಹುದು ಎಂದು ಸುಳ್ಳನ್ನು ಹೇಳಕೂಡದು**" ಅಂತಹ ಸುಳ್ಳನ್ನು ಹೇಳಿದಾಗ ಕೇಳುವವರಿಗೆ ತಾತ್ಕಾಲಿಕವಾಗಿ ಸಂತೋಷವಾಗುವುದೇನೋ ಸರಿ. ಆದರೆ ಅದು ಸುಳ್ಳು ಎಂದು ತಿಳಿದಾಗ ಆಗುವ ಭ್ರಮನಿರಸನ ಮತ್ತು ವೇದನೆ ಮೊದಲಿನ ಸಂತೋಷಕ್ಕಿಂತಲೂ ಹೆಚ್ಚಲ್ಲವೇ? ಆದರೆ ಇದಕ್ಕೂ ಅಪವಾದವಿದೆ. ಈ ಕಥೆಯನ್ನು ಕೇಳಿ. ಕತೆಗಾರನ ಹಿನ್ನೆಲೆ ಈ ರೀತಿ ಇದೆ:

ಪ್ರಾಚೀನ ಪಾರಸೀ ಕವಿಗಳಲ್ಲಿ ನಾಲ್ವರು ಅಗ್ರಗಣ್ಯರು. ಅವರು ಯಾರೆಂದರೆ: **ಫಿರ್ದೂಸಿ, ಉಮರ್ ಖಯ್ಯಾಂ, ಸಾದಿ** ಮತ್ತು **ಹಾಫಿಜ್**. ಇವರೆಲ್ಲರೂ ಕ್ರಿ ಶ 11 ರಿಂದ 14 ನೆಯ ಶತಮಾನದಲ್ಲಿದ್ದವರು. ಈ ನಾಲ್ಕುಕವಿಗಳು ಹೆಸರಿಗೆ ಮುಸ್ಲಿಮರಾಗಿದ್ದರೂ, ಕಟ್ಟಾ ಸಂಪ್ರದಾಯವಾದಿಗಳಲ್ಲ. ಇವರನ್ನು liberal minded ಎಂದು ಹೇಳಬಹುದಾದ ಸೂಫಿ ಎಂಬ ಪಂಗಡಕ್ಕೆ ಸೇರಿಸಬಹುದು..

ಫಿರ್ದೂಸಿ ಎಂಬುವನು **ಷಾ ನಾಮಾ** ಎಂಬ ಬೃಹದ್ಗ್ರಂಥವನ್ನು ಬರೆದು ಪ್ರಖ್ಯಾತನಾದನು. ಈ ಷಾ ನಾಮಾದಲ್ಲಿ ಪರ್ಷಿಯಾದ ಪ್ರಾಚೀನ ಕಾಲದ ರಾಜರುಗಳ ಮತ್ತು ವೀರರ ಕಥೆಗಳು ಇವೆ.

ಉಮರ್ ಖಯ್ಯಾಮನಿಗೆ ಹಕೀಮ ಎಂದರೆ ಪಂಡಿತ ಎಂಬ ಬಿರುದಿತ್ತು. ಏಕೆಂದರೆ ಇವನು ಕವಿ ಮಾತ್ರವಲ್ಲ, ಗಣಿತಶಾಸ್ತ್ರದಲ್ಲೂ ಪಂಡಿತನಾಗಿದ್ದನು.ಇವನ **ರುಬೈಯಾತ್** ಬಹಳ ಪ್ರಸಿದ್ಧವಾದ ಗ್ರಂಥ, ಇದರ ಮುಖ್ಯ ಸಾರಾಂಶ: **ನಾಳೆ ಏನಾಗುತ್ತದೆಯೋ ಏನೋ, ಎಂದು ಇಂದು ನವೆಯುವುದು ಏತಕ್ಕೆ?**

ಸಾದಿಗೆ ಶೇಖ್ ಎಂಬ ಬಿರುದುಂಟು. ಶೇಖ್ ಎಂದರೆ ಪೂಜ್ಯ. ಇವನ ಕಾಲ ಸುಮಾರು ಕ್ರಿ.ಶ. 1084 ರಿಂದ 1192 ರವರೆಗೆ. ಎಂದರೆ ಇವನು 108 ವರ್ಷ ಬದುಕಿದ್ದನು. ಆಗ ನಮ್ಮ ಕರ್ನಾಟಕದಲ್ಲಿ ಹೊಯ್ಸಳ ರಾಜರು ರಾಜ್ಯವಾಳುತ್ತಿದ್ದರು. ನಮ್ಮಲ್ಲಿ ಅನೇಕರಿಗೆ ಘಜಲ್ ಎಂಬ ಉರ್ದು/ಹಿಂದಿ ಗೀತೆಗಳ ಪರಿಚಯವಿದೆ. K L ಸೈಗಲ್, ಮುಹಮ್ಮದ್ ರಫಿ, ಬೇಗಂ ಅಖ್ತರ್, ಪಂಕಜ್ ಉದಾಸ್ ಮುಂತಾದವರ ಘಜಲ್ ಹಾಡುಗಳನ್ನು ಕೇಳಿ ಆನಂದಿಸುವರ ಸಂಖ್ಯೆ ಲೆಕ್ಕವಿಲ್ಲದಷ್ಟು. ಘಜಲುಗಳೆಂದರೆ ಸಂಗೀತಕ್ಕೆ ಅಳವಡಿಸಲಾಗುವ ಕವಿತೆಗಳು. ಈ ಕವಿತೆಗಳು ಪ್ರೇಮ ಗೀತೆಗಳಾಗಿರಬಹುದು, ಬೋಧಪ್ರದವಾಗಿರಬಹುದು, ಅಥವಾ ಭಕ್ತಿಗೀತೆಗಳೂ ಆಗಿರಬಹುದು. ಸಾದಿಯೇ ಘಜಲಿನ ಜನಕ ಎಂದು ಹೇಳಿತ್ತಾರೆ.

ಇವನ ನಂತರ ಬಂದ **ಹಾಫಿಜ್** ಘಜಲ್ ರಚನಕಾರರಲ್ಲಿ ಬಹಳ ಪ್ರಖ್ಯಾತನಾದನು.

ಸಾದಿಯು ಅನೇಕ ಗ್ರಂಥಗಳನ್ನು ಬರೆದನು. ಅದರಲ್ಲಿ **ಗುಲಿಸ್ತಾನ್** (ಹೂಗಳ ತೋಟ) ಮತ್ತು **ಬೋಸ್ತಾನ್** (ಪರಿಮಳದ ಉದ್ಯಾನ) ಎಂಬುವು ಜನಪ್ರಿಯವಾದವು. ಗುಲಿಸ್ತಾನ್ ಗ್ರಂಥದಲ್ಲಿ ಬೋಧಪ್ರದವಾದ ಅನೇಕ ಕಿರುಗತೆಗಳಿವೆ. ಅವುಗಳಲ್ಲಿ ಒಂದು ಸಮಯೋಚಿತವಾಗಿದೆ. ಈ ಕಥೆ ಮಧುಗಿರಿ ವಾಸುದೇವಮೂರ್ತಿಗಳು ರಚಿಸಿದ **ಗುಲಿಸ್ತಾನ್ ಕಥೆಗಳು** ಎಂಬ ಗ್ರಂಥದಲ್ಲಿದೆ (ಸ್ವಲ್ಪ ವಿಶದೀಕರಿಸಿದ್ದೇನೆ).

ಒಬ್ಬ ದೊರೆ ಏನೂ ವಿಚಾರಣೆ ಮಾಡದೆಯೇ ತನ್ನ ಕೈಗೆ ಸಿಕ್ಕಿದ್ದ ಒಬ್ಬ ವಿದೇಶದ ಸೆರೆಯಾಳಿಗೆಮರಣ ದಂಡನೆ ವಿಧಿಸಿದ. ಆ ಮನುಷ್ಯನಿಗೆ ದಿಕ್ಕು ಕಾಣದೆ ಹತಾಶನಾಗಿ, ಅರಸನನ್ನು ತನ್ನ ಭಾಷೆಯಲ್ಲಿ ಬೈದು ಕೆಟ್ಟ ಮಾತುಗಳನ್ನಾಡಿದ. "ಜೀವದ ಮೇಲೆ ಆಸೆಯಿಲ್ಲದ ಮನುಷ್ಯ ಮನಸ್ಸಿಗೆ ಬಂದಿದುದನ್ನು ಹೇಳುವುದಕ್ಕೆ ಹಿಂಜರಿಯುವುದಿಲ್ಲ" ಎಂದು ಬಲ್ಲವರು ಹೇಳುತ್ತಾರಲ್ಲವೆ?

ದೊರೆಗೆ ಆ ಸೆರೆಯಾಳು ಹೇಳಿದ್ದು ಅರ್ಥವಾಗಲಿಲ್ಲ. ಇವನು ಏನು ಹೇಳುತ್ತಾನೆ? ಎಂದು ಒಬ್ಬ ಮಂತ್ರಿಯನ್ನು ಕೇಳಿದ. ಅವನು ಹೀಗೆ ಉತ್ತರಿಸಿದ: " ಒಡೆಯ, ಈ ಮನುಷ್ಯ ಹೇಳಿದ್ದೇನೆಂದರೆ: ಬಂದ ಕೋಪವನ್ನು ತಡೆದು ಇತರರನ್ನು ಮನ್ನಿಸುವ ಧರ್ಮಾತ್ಮರಿಗೇ ಸ್ವರ್ಗ ಇರುವುದು. ದೇವರು ಅಂಥವರನ್ನು ಖಂಡಿತ ಸಲಹುತ್ತಾನೆ, ಎಂದು." ದೊರೆಗೆ ಮರುಕವಾಯಿತು. ಈ ಬಂದಿಯ ರಕ್ತವನ್ನು ಹರಿಸಬೇಡಿ ಎಂದು ಅಪ್ಪಣೆ ಮಾಡಿದ.

ಆಗ ಎದುರು ಪಕ್ಷದ ಮಂತ್ರಿ ಎದ್ದು ತಟ್ಟನೇ ಹೇಳಿದ: "ಮಂತ್ರಿಗಳು ದೊರೆಗಳ ಎದುರಿನಲ್ಲಿ ಸತ್ಯವನ್ನೇ ನುಡಿಯಬೇಕು, ಸುಳ್ಳನ್ನಲ್ಲ. ನಿಜವಾಗಿ ಹೇಳಬೇಕೆಂದರೆ ಈ ಪಾಪಿ ತಮ್ಮನ್ನು ಹೀನಾಮಾನವಾಗಿ ಬೈದಿದ್ದಾನೆ" ದೊರೆಗೆ ಈ ಮಾತಿನಿಂದ ಅಸಮಾಧಾನವಾಯಿತು.

ಮುಂದಿನ ಪುಟ ನೋಡಿ ...

ಅವನು ಅಂದ "ಅಯ್ಯಾ ನಿನ್ನ ಈ ನಿಜಕ್ಕಿಂತಲೂ ಮೊದಲನೆಯ ಮಂತ್ರಿ ಹೇಳಿದ ಸುಳ್ಳಿನಿಂದಲೇ ನನಗೆ ಸಂತೋಷವಾಯಿತು. ಆತನ ಮಾತು ನೀತಿಯಲ್ಲಿ ಆಡಿದ್ದು; ನಿನ್ನ ಮಾತು ಕಿಚ್ಚಿನಿಂದ ಆಡಿದ್ದು. ಆ ಮಾತಿನಿಂದ ನರವಧೆ ತಪ್ಪಿತು, ನಿನ್ನ ನಿಜದ ಮಾತು ಅನಾಹುತಕ್ಕೆ ಕಾರಣವಾಗುತ್ತಿತ್ತು. **ಶಾಂತಿಗಾಗಿ ಆಡುವ ಸುಳ್ಳು, ಜಗಳ ತೆಗೆಯುವ ನಿಜಕ್ಕಿಂತ ಮೇಲು.**"

ಮೊದಲಿನ ಕಥೆಯ ಪ್ರಕಾರ ಅಪ್ರಿಯವಾದ ಸತ್ಯದಿಂದ ಇಬ್ಬರು ಬದುಕಿ ಕೊಂಡರು, ಎರಡನೆಯ ಕಥೆಯ ಪ್ರಕಾರ ಕೇಳುವುದಕ್ಕೆ ಹಿತವಾದ ಸುಳ್ಳನ್ನು ಹೇಳಿದ್ದರಿಂದ ಒಬ್ಬನಿಗೆ ಜೀವದಾನ ಮಾಡಲಾಯಿತು. ಈ ವಿಚಾರಸರಣಿಯನ್ನು ನೋಡಿದರೆ, ನಮ್ಮ ಪೂರ್ವಿಕರು ರಚಿಸಿರುವ ಈ ಸುಭಾಷಿತದಲ್ಲಿ ಸತ್ಯವಿದೆ ಎಂದು ಅನಿಸುತ್ತದೆ:

ನ ಸತ್ಯಂ ಕೇವಲಂ ಸತ್ಯಂ ಅನೃತಂ ನ ತಥಾನೃತಮ್|
ಹಿತಂ ಯತ್ ಸರ್ವಲೋಕಸ್ಯ ತತ್ಸತ್ಯಂ ಶೇಷಮನ್ಯಥಾ ||

ಮೇಲ್ನೋಟಕ್ಕೆ ಸತ್ಯದಂತೆ ಕಾಣುವಂತಿರುವುದೆಲ್ಲವನ್ನು ಸತ್ಯವೆಂದೂ, ಮಿಥ್ಯೆಯಂತಿರುವುದನ್ನು ಸುಳ್ಳೆಂದೂ ತಿಳಿಯಲಾಗದು. **ಯಾವುದು ಎಲ್ಲರಿಗೂ ಹಿತವೋ ಅದೇ ಸತ್ಯ, ಮಿಕ್ಕವೆಲ್ಲವೂ ಅಸತ್ಯ.**

ನಿಮ್ಮ ಅನಿಸಿಕೆ ಏನು? ▪

ಕನ್ನಡವನ್ನು ನಮಗೂ, ನಮ್ಮ ಮುಂದಿನ ತಲೆಮಾರಿಗೂ ಹೇಗೆ ಉಳಿಸಿಕೊಂಡು, ಬೆಳೆಸಿಕೊಂಡು ಹೋಗಬಹುದೆಂದು ತಿಳಿಸಿ.

ಇದು ನಿಮ್ಮ ಸ್ವಂತ ಅನುಭವವಾಗಿರಬಹುದು. ಅಥವಾ ನಿಮ್ಮ ಆಲೋಚನೆಯೂ ಆಗಿರಬಹುದು.

ನೀವು ಕಥೆ ಕವನಗಳ ಮೂಲಕವೂ ತಿಳಿಸಬಹುದು.

ಚಿಲುಮೆಯ ಸಂಪಾದಕೀಯ ಸಮಿತಿಯು ಆರಿಸಲ್ಪಟ್ಟ ಬರಹಗಳನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.

ನಿಮ್ಮ ಬರಹಗಳನ್ನು ಇಲ್ಲಿಗೆ ಕಳಿಸಿ **horanadachilume@gmail.com**



ಹಳೆಯ ಭಕ್ತಿಶ್ರದ್ಧೆಯಳಿಸಿಹೋಗಿದೆ ಮಾಸಿ |
ಸುಳಿದಿಲ್ಲವಾವ ಹೊಸ ದರ್ಶನದ ಹೊಳಪುಂ ||
ಪಳಗಿದ್ದ ಮನೆ ಬಿದ್ದ ಕುಂಟ ಕುರುಡನ ತೆರದಿ |
ತಳಮಳಿಸುತಿದೆ ಲೋಕ ಮಂಕುತಿಮ್ಮ ||

ಭಕ್ತಿಶ್ರದ್ಧೆಯಳಿಸಿಹೋಗಿದೆ=ಭಕ್ತಿ+ಶ್ರದ್ಧೆಯು+ಅಳಿಸಿಹೋಗಿದೆ, ಸುಳಿದಿಲ್ಲವಾವ=ಸುಳಿದಿಲ್ಲವು+ಆವ, ಮಾಸು=ಅಳಿಸು, ದರ್ಶನ=ಸಿದ್ಧಾಂತದ ಹೊಸರೂಪ, ತೆರದಿ=ತರಹೆ, ತಳಮಳಿಸು=ಒದ್ದಾಡು, ಪರದಾಡು.

ಈಗ್ಗೆ ಎಪ್ಪತ್ತು ವರ್ಷಗಳ ಕೆಳಗೇ ಗುಂಡಪ್ಪನವರಿಗೆ ಹೀಗೆ ಅನ್ನಿಸಿದ್ದರೆ, ಇಂದು ಅವರು ಏನನ್ನುತ್ತಿದ್ದರೋ ಏನೋ! ಪುರಾತನ ಕಾಲದಿಂದಲೂ ಅನೂಚಾನವಾಗಿ ಜನಗಳಲ್ಲಿ ದೇವರಲ್ಲಿ ಇದ್ದ ಭಕ್ತಿ ಮತ್ತು ಸಂಪ್ರದಾಯಗಳಲ್ಲಿ ಇದ್ದ ಶ್ರದ್ಧೆ ಈಗ ಅಳಿಸಿ ಹೋಗಿದೆ. ಜನರಲ್ಲಿ ಮತ್ತೆ ಈ ಭಕ್ತಿ ಮತ್ತು ಶ್ರದ್ಧೆಗಳನ್ನು ತರಲು ಯಾವ ಹೊಸ ಸಿದ್ಧಾಂತಗಳೂ ಪ್ರತಿಪಾದಿಸಲ್ಪಟ್ಟು ಪ್ರಚಾರಕ್ಕೆ ಬಂದಿಲ್ಲ. ಹಾಗಾಗಿ ಜನರೆಲ್ಲರೂ ಮೊದಲಿನಿಂದ ಬಂದದನ್ನು ಕಳೆದು ಕೊಂಡು ಹೊಸದಿಲ್ಲದೆ ಒಂದು ಅತಂತ್ರ ಸ್ಥಿತಿಯಲ್ಲಿದ್ದಾರೆ. ಯಾರ ಸಹಾಯವೂ ಇಲ್ಲದೆ ಸುಲಭವಾಗಿ ಮತ್ತು ಚೆನ್ನಾಗಿ ಓಡಾಡಲು ಅಭ್ಯಾಸವಾಗಿರುವ ಮನೆ ಕುಸಿದು ಹೋದರೆ, ಆ ಮನೆಯಲ್ಲಿ ವಾಸಿಸುತ್ತಿರುವ ಕುಂಟನಿಗೋ ಕುರುಡನಿಗೋ, ಪಾಪ ತಳಮಳಿಸುವ ಮತ್ತು ಪರದಾಡುವಂತೆ ಆಗುತ್ತದಲ್ಲವೇ? ಹಾಗೆ ಆಗಿದೆ ಇಂದಿನ ಲೋಕದ ಪರಿಸ್ಥಿತಿ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಇಲ್ಲಿ ಭಕ್ತಿ ಎಂದರೆ ಪರಮಾತ್ಮನ ಮೇಲಿರುವ ಭಕ್ತಿ ಎಂದೇ ತಿಳಿಯಬೇಕಿಲ್ಲ. ಆದರೆ ನಾವು ಮಾಡುವ ಎಲ್ಲ ಕೆಲಸಗಳೂ ನಮ್ಮೊಳಗಿರುವ ಪರಮಾತ್ಮ ಸ್ವರೂಪೀ ಜೀವಾತ್ಮನು ತೃಪ್ತನಾಗುವುದಕ್ಕೆ ಅಂದರೆ ಆತ್ಮ ತೃಪ್ತಿಗೆ, ಎಂದುಕೊಂಡಾಗ, ಆ ಕೆಲಸದಲ್ಲಿ ಭಕ್ತಿ. ಆ ಭಕ್ತಿ ಇದ್ದಾಗ, ಮಾಡುವ ಕೆಲಸದಲ್ಲಿ ಶ್ರದ್ಧೆ ಬರುತ್ತದೆ. ಹಾಗೆ ಭಕ್ತಿ ಮತ್ತು ಶ್ರದ್ಧೆ ಎರಡೂ ಇದ್ದಾಗ, ಮಾಡುವ ಕೆಲಸ ಸಮರ್ಪಕವಾಗಿದ್ದು ಅದರ ಫಲವೂ ಒಳ್ಳೆಯದಾಗಿರುತ್ತದೆ. "ಹೇಗೆ ಮನವೋ ಹಾಗೆ ಭಾವ. ಹೇಗೆ ಭಾವವೋ ಹಾಗೆ ಕಾರ್ಯ. ಹೇಗೆ ಕಾರ್ಯವೋ ಹಾಗೆ ಫಲ". ಹಾಗಾಗಿ ಮನಸ್ಸಿನಲ್ಲಿ ಭಕ್ತಿ ಮತ್ತು ಶ್ರದ್ಧೆಗಳು ಬಹಳ ಮುಖ್ಯ. ಆದರೆ ಅದು ಈಗ ಮಾಸಿ ಹೋಗಿದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಹೇಗೆ ಮಾಸಿ ಹೋಯಿತು? ಹಲವಾರು ಕಾರಣಗಳು. ಕಾಲ ಬದಲಾದಂತೆ ಎಲ್ಲವೂ ಬದಲಾಗುತ್ತದೆ. ಆದರೆ ನಕಾರಾತ್ಮಕ ಬದಲಾವಣೆಯಾದರೆ ಅದು ಸರಿಯಲ್ಲ. ಆದ್ದರಿಂದಲೇ ಮಾಸಿ ಹೋದದ್ದು. ಹಿರಿಯರು ಅವರ ಅನುಭವ ಮತ್ತು ಜ್ಞಾನದ ಮೂಸೆಯಿಂದ ಕಿರಿಯರಿಗೆ ಜ್ಞಾನವನ್ನು ಎರಕ ಹೊಯ್ದಂಗೆ ಎರೆಯಬೇಕು. ಆದರೆ ನಮ್ಮಲ್ಲಿ ಕಾಲಕ್ರಮೇಣ 'ಏನು' ಮಾಡಬೇಕು ಎನ್ನುವುದನ್ನು ಮಾತ್ರ ಹೇಳುತ್ತಿದ್ದರು. 'ಹೇಗೆ' ಮಾಡಬೇಕು ಎನ್ನುವುದನ್ನೂ ಹೇಳುತ್ತಿದ್ದರು, ಆದರೆ 'ಏಕೆ' ಮಾಡಬೇಕು ಎಂದು ಕೇಳಿದರೆ ಅದಕ್ಕೆ "ಬಂಡಾಯ"ವೆನ್ನುತ್ತಿದ್ದರು. "ಹೇಳಿದಷ್ಟು ಮಾಡೋ ತಲೆಹರಟೆ" ಎನ್ನುತ್ತಿದ್ದರು. ಒಂದು ಅವರಿಗೆ ಹೇಳಲು ಗೊತ್ತಿರಲಿಲ್ಲ ಅಥವಾ ಹೇಳಬೇಕಾದ ವಿಷಯವೇ ಗೊತ್ತಿರಲಿಲ್ಲ ಅಥವಾ ಅವರಿಗೆ ಗೊತ್ತಿದ್ದ ವಿಷಯದ ಸಂಪೂರ್ಣ ಜ್ಞಾನವಿರಲಿಲ್ಲ. ಒಂದು ಕೆಲಸ, ಆ ಕೆಲಸ ಮಾಡುವ ರೀತಿ ಮತ್ತು ಅದರ ಅಂತರ್ಯದ ಉದ್ದೇಶ ಇವುಗಳನ್ನು ಅರಿಯುವುದು ಬಹಳ ಮುಖ್ಯ.ಅದನ್ನು ವಿವರಿಸದೆ ಕೆಲಸವನ್ನಷ್ಟೇ ಮಾತ್ರ ವಿವರಿಸಿ ಮಾಡಲು ಬಿಟ್ಟಾಗ, ಆ ಕೆಲಸದಲ್ಲಿ ಅವರಿಗೆ ತಿರಸ್ಕಾರ ಹುಟ್ಟಿ ಮಾಡುವ ಕೆಲಸದಲ್ಲಿ ಶ್ರದ್ಧೆ ಇರುವುದಿಲ್ಲ. ಶ್ರದ್ಧೆ ಇಲ್ಲದಿದ್ದರೆ ಭಕ್ತಿಯೂ ಹುಟ್ಟುವುದಿಲ್ಲ.

ಅಂತರ್ಯದ ಭಾವ ಹೇಳಿಕೊಡುವುದು ಅಷ್ಟು ಸುಲಭವಲ್ಲ. ಮೊದಲು ಹೇಳಿಕೊಡುವವನಿಗೆ, ಆ ಭಾವ ಸಿದ್ಧಿಯಾಗಿರಬೇಕು. ಹೇಳಿಕೊಡುವ ಮತ್ತು ಎರಕ ಹೊಯ್ಯುವ ಕಲೆ ಸಿದ್ಧಿಯಾಗಿರಬೇಕು ಮತ್ತು ಹೊಯ್ಯಬೇಕಾದ ಪಾತ್ರದ "ಪಾತ್ರತೆಯ" ಮತ್ತು "ಯೋಗ್ಯತೆಯ" ಅರಿವು ಅವನಿಗೆ ಇರಬೇಕು. ಒಟ್ಟಾರೆ ಹೇಳಬೇಕೆಂದರೆ ಇಂದು ಹಾಗೆ ಹೇಳಿಕೊಡುವವರಾಗಲೀ, ಕಲಿಯುವವರಾಗಲೀ ಇಲ್ಲ. ಇದನ್ನೇ ಗುಂಡಪ್ಪನವರು "ಮಾಸಿ ಹೋಗಿದೆ" ಎನ್ನುತ್ತಾರೆ. ಹಾಗೆ ಮಾಸಿಹೋದದ್ದರಿಂದ ಏನಾಗಿದೆ ಎಂದರೆ, ಮೊದಲೇ ನಾವು ಬಲಹೀನರು. ತತ್ವದ ಬಲವಿಲ್ಲದೆ ಸತ್ವಹೀನರು. ಸತ್ಯದ ಬಲವಿಲ್ಲದೆ ಸತ್ವಹೀನರು. ಯಾವುದೋ ಒಂದನ್ನು ಹಿಡಿದುಕೊಂಡು ಹೇಗೋ ಬದುಕುತ್ತಿದ್ದೆವು. ಈಗ ನಾವು ಹಿಡಿದಂತಾ ವಸ್ತುವೇ ಬಲಹೀನವಾಗಿ ನಮ್ಮ ಅಸ್ತಿತ್ವವೇ ಅಲುಗಾಡುತ್ತಿದೆ. ಹಿಡಿದ ಕೊಂಬೆ ಮುರಿದರೆ, ಹಿಡಿಯಲು ಮತ್ತೊಂದು ಕೊಂಬೆ ಇದ್ದರೆ ಹಿಡಿದು ತೂಗಾಡಬಹುದು. ಇಲ್ಲದಿದ್ದರೆ ಬೀಳುವುದೇ ದಾರಿ. ಚೆನ್ನಾಗಿ ಓಡಾಡಲು ಅಭ್ಯಾಸವಾಗಿರುವ ಮನೆ ಕುಸಿದು ಹೋದರೆ, ಆ ಮನೆಯಲ್ಲಿ ವಾಸಿಸುವ ಕುಂಟನಿಗೋ ಕುರುಡನಿಗೋ, ತೊಂದರೆಯಾಗಿ ಅವನು ತಡಬಡಾಯಿಸುವಂತೆ ನಾವೂ ಸಹ ನಮ್ಮ ಭಕ್ತಿ ಶ್ರದ್ಧೆಗಳನ್ನು ಕಳೆದು ಕೊಂಡು ಅತಂತ್ರದ ಸ್ಥಿತಿಯಲ್ಲಿದ್ದೇವೆ ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು.

ಹೋಗಲಿ ಹಳೆಯದನ್ನೇನೋ ಕಳೆದುಕೊಂಡಿದ್ದೇವೆ, ಹೊಸದೇನಾದರೂ ಇದೆಯೋ, ಅದನ್ನು ಹಿಡಿದುಕೊಳ್ಳೋಣವೆಂದರೆ ಅದೂ ಇಲ್ಲ. ನಮ್ಮ ದೇಶದಲ್ಲೇ ಅಲ್ಲ ಇಡೀ ಜಗತ್ತಿನ ಪರಿಸ್ಥಿತಿಯೇ ಹೀಗಿದೆ. ನಮ್ಮ ಭಾರತೀಯ ಸಮಾಜದಲ್ಲಿ ಬೇರೆ ಯಾವ ದೇಶದಲ್ಲೂ ಸಿಗದಂತ ಅತ್ಯಮೂಲ್ಯವಾದ ಸಂಸ್ಕೃತಿ, ಪರಂಪರೆ, ದರ್ಮಬೋಧನೆ, ಎಲ್ಲವೂ ಇದೆ. ಅದನ್ನು ಪುನರುಜ್ಜೀವನಗೊಳಿಸಿ ಮುಂದಿನ ಪೀಳಿಗೆಗೆ ಎರಕಹೊಯ್ಯಬೇಕಾದ ಉತ್ತರದಾಯತ್ವ ನಮ್ಮೆಲ್ಲರ ಮೇಲಿದೆ. ಕನ್ನಡಿಯ ಮೇಲಿನ ಧೂಳನ್ನು ಒರೆಸಿ, ಶುದ್ಧಿಗೊಳಿಸಿ ಪ್ರತಿಬಿಂಬ ನಿಚ್ಚಳವಾಗಿ ಕಾಣುವಂತೆ ಮಾಡಬೇಕಾಗಿದೆ.▪

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಕುಡುಕ ಕೆಂಚನ ಬಜೆಟ್ ವ್ಯಾಖ್ಯಾನ

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್‌ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ಸರ್ಕಾರಕ್ಕೆ ಜೋಡಿಸ್ತೀನಿ ಎಂಡ ಮುಟ್ಟಿದ್ ಕೈನ
ಭೂಮಿಯುದ್ಕೂ ಬೊಗ್ಗಿಸ್ತೀನಿ ರೋಗ ತುಂಬಿದ್ ಮೈನ
ಬುರ್ಬುರ್ ನೊರೆ ಬಸ್ಯೋವಂತ ಕೊಳ್ತ ಕೆರೆ ಪಕ್ಕ
ಸೊರ್ಸೊರ್ ಈರಕ್ಕೆಂಡದಂಗ್ದಿ ಯಿಟ್ಟೆ ಥ್ಯಾಂಕ್ಸ್ ಕಣ್ರಪ್ಪ

ಲಚುಮೀನೆಲ್ಲ ಬಡ್ವರ್ಗಂತ ಠಕ್ಕನೆತ್ಕೊಟ್ಬುಟ್ಟೆ
ಕಚಕ್ಕಂತ ಕೊಯ್ಯೋವ್ನ್‌ಗೂನೂ ಲಕ್ಸಾಂತ್ರಾನ ಕೊಟ್ಟೆ
ಕರ್ಚುಮಾಡೋ ಇಸಯ್ದಾಗೆ ಕುಡ್ಕನ್ನಿಂದಕ್ಬುಟ್ಟೆ
ತೊಂಚವಂಚ ಇದ್ರೀನೀಗ ವೋಟು ನಿಮ್ಗೇ ಗಟ್ಟೇ

ಫುಲ್ ಟೈಟ್ ಕುಡುಕ ಕೆಂಚಯ್ಯ ರಾಗವಾಗಿ ಹಾಡುತ್ತಿದ್ದುದನ್ನು ಕಂಡ ರಿಪೋರ್ಟರ್ ರಾಧೇಶ್ಯಾಮ ಅವನ ಮೂತಿಗೆ ಮೈಕ್ ಹಿಡಿದು "ಬಜೆಟ್ ಎಂಗನಿಸ್ತದೆ?" ಅಂದ.

"ನಮ್ಮಂತ ಕುಡುಕರಿಗೇ ಆ ಬಜೆಟ್ ಇರೋದು" ಎಂದ ಕೆಂಚ

"ವೀಕ್ಷಕರೇ, ನಿಮಗಾಗಿ ಬಿಗ್ ಬ್ರೇಕಿಂಗ್ ನ್ಯೂಸ್. ಕುಡುಕ ಕೆಂಚಯ್ಯನವರು ಬಜೆಟ್ ಕುಡುಕರ ಪರ ಅಂತಿದ್ದಾರೆ. ಕೆಂಚಯ್ಯನವರೆ, ನೀವು ಏಳಿ ಸಾರ್"

"ಏಳಕ್ಕೆ ಆಗಲ್ಲಪ್ಪ. ಫುಲ್ ಟೈಟು"

"ಕೂತ್ಕೊಂಡೇ ಏಳಿ ಸಾರ್"

"ಕೂತ್ಕೊಂಡೇ ಏಳೋದಾ? ಹಾಗಂದ್ರೆ?"

"ಬಾಡಿ ಕೂತಿರ್ಲಿ; ನಾಲಗೆ ಏಳಲಿ. ಟಾಕ್ ಮಾಡಿ ಸಾರ್" ಎನ್ನುತ್ತಾ ಮೈಕನ್ನು ತುಟಿಗೇ ತಗುಲಿಸಿದ.

ರಾಧೇಶ್ಯಾಮನಿಗೆ ಬಾಲ್ಯದಲ್ಲಿ ಅವರಪ್ಪ ದರ್ಬೆ ಹಾಕಿ ನಾಲಿಗೆ ತಿಕ್ಕಲಿಲ್ಲವಾದ್ದರಿಂದ ಬರೀ ಅಪಭ್ರಂಶವೇ ಅವನ ಮಾತಿನಲ್ಲಿ ಎದ್ದು ಕಾಣುತ್ತಿತ್ತು.

ಒಮ್ಮೆ "ಅಕ್ಕಿಯನ್ನು ಆರಿಸಿಕೊಂಡು ಬಂದು ಅದ್ದು ತಿಂದಿತು" ಎಂದ ಬಾಲ ರಾಧೇ.

"ಯಾವುದರಲ್ಲಿ ಅದ್ದಿ ತಿಂದಿತೋ?" ಎಂದ ಅವನಪ್ಪ.

"ರಸ್ತೆಯಲ್ಲಿ"

"ದಡ್ಡ. ಸಾರಿನಲ್ಲಿ, ಪಲ್ಯದಲ್ಲಿ, ಚಟ್ನಿಯಲ್ಲಿ, ಗೊಜ್ಜಿನಲ್ಲಿ ಅಕ್ಕಿಯನ್ನು ಅದ್ದಿ ತಿನ್ನಬಹುದು. ರಸ್ತೆಯಲ್ಲಿ ಏನು ಅದ್ದುತ್ತಾರೋ?" ಅಪ್ಪನಿಗೆ ಗೊಂದಲ.

"ಹಯ್ಯೋ ಹಪ್ಪ! ಅದ್ದು ಅಂದರೆ ಹಾಕಾಸದಲ್ಲಿ ಆರತ್ತಲ್ಲ, ಕೊಕ್ಕು ಹಿರೋದು, ಹದು. ಅಕ್ಕಿ ಹಂದರೆ ಗೂಡು ಕಟ್ಟಿ ಮರಿ ಹಿಡತ್ತಲ್ಲ, ಹದು"

ಅಪ್ಪನಿಗೆ ಮಗ ಹೇಳಿದುದು "ಹಕ್ಕಿಯೊಂದನ್ನು ಹಾರಿಸಿಕೊಂಡು ಬಂದು ಹದ್ದು ತಿಂದಿತು" ಎಂದು ಅರ್ಥವಾಗಲು ಅರ್ಧ ಗಂಟೆಯೇ ಹಿಡಿದಿತ್ತಂತೆ.

ಅಂತಹ ರಾಧೇಶ್ಯಾಮ ಈಗ ಕೆಂಚನ ಮುಂದೆ ನಿಂತಿರುವ ಟಿವಿ ವರದಿಗಾರ!

"ಕುಡುಕರು ಹೆಣ್ಣುಮಕ್ಕಳಿಗೆ ಬಟ್ಟೆ ಕೊಡಿಸಲಾರದಷ್ಟು ಫೈನಾನ್ಶಿಯಲಿ ಟೈಟ್ ಆಗಿರ್ತಾರೆ ಅಂತ ಸರ್ಕಾರಕ್ಕೆ ಗೊತ್ತಿದೆ. ಅದಕ್ಕೇ ಚೂಡಿದಾರ್ ಭಾಗ್ಯ ನೀಡಿದ್ದಾರೆ. ಅವರು ಹೆಂಡತಿಯು ಗರ್ಭಿಣಿಯಾದಾಗ ಆಸ್ಥೆಯಿಂದ ನೋಡಿಕೊಳ್ಳುವುದಿಲ್ಲ. ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಾರೆ ಎಂದು ಸಹ ಸರ್ಕಾರಕ್ಕೆ ಗೊತ್ತು. ಅದಕ್ಕೇ ಗರ್ಭಿಣಿಯರಿಗೆ ಬಿಸಿ ಊಟ ವ್ಯವಸ್ಥೆ ಮಾಡಿದಾರೆ"

"ಅದಕ್ಕೂ ಮುಂಚೆ ಅವರಿಗೆ ಸೇಂದಿ ಭಾಗ್ಯ ನೀಡಿದಾರಲ್ಲಾ..." ರಾಧೇಶ್ಯಾಮ ತನ್ನ ಅರಿವಿನ ಪ್ರದರ್ಶನ ಮಾಡಿದ.

"ಅದು ಸೇಂದಿ ಭಾಗ್ಯ ಅಲ್ಲ. ಶಾದಿ ಭಾಗ್ಯ. ಮದುವೆ ಆದಾಗಲೇ ರಿಟೈರೂ ಆಗೋ ಸ್ಕೀಮ್ ನೀಡಿದೆ ನಮ್ಮ ಸರ್ಕಾರ"

"ಎಂಗೆ?"

"ಒಂದು ಜಾತಿಗೆ ಸೇರಿದ ವಿಧವೆಯನ್ನ ಮದುವೆ ಆಗೋವ್ರಿಗೆ ಮೂರು ಲಕ್ಷ ಕೊಡತ್ತಂತೆ. ವರದಕ್ಷಿಣೆ ವಿರೋಧ ಕಾಯಿದೆ ತಂದ ಸರ್ಕಾರಾನೇ ವರದಕ್ಷಿಣೆ ಕೊಟ್ಟಹಾಗಾಯ್ತು. ಮೂರು ಲಕ್ಷದಲ್ಲಿ ಎರಡು ಲಕ್ಷ ಪಟ್ಟಾಗಿ ಕುಡಿದು, ಒಂದು ಲಕ್ಷದಲ್ಲಿ ಹೆಂಡತಿಯ ಕೈಯಲ್ಲೇ ಹೆಂಡದಂಗಡಿಯ ಪಕ್ಕದಲ್ಲಿ ಉಪ್ಪಿನಕಾಯಿ, ಚಿಪ್ಸ್ ಪ್ಯಾಕೆಟ್ ವ್ಯಾಪಾರ ಮಾಡಿಸಿದರೆ ಅಮಲಿಗೆ ಅಮಲು, ಆದಾಯಕ್ಕೆ ಆದಾಯ, ಕುಡಿದ ನಾಲಿಗೆಗೆ ಚುರುಕು. ಸರ್ಕಾರಕ್ಕೆ ಜೈ" ತೊದಲುನಾಲಿಗೆಯಲ್ಲೂ ಕುಡುಕ ಕೆಂಚನ ಕನ್ನಡ ಸ್ಪಷ್ಟ.

"ಮೂರು ಲಕ್ಷ ಕೊಡೋದು ಗಂಡಿಗಲ್ಲ, ಹೆಣ್ಣಿಗೆ"

"ಅವಳ ಜೀವಾನೇ ಕಿತ್ಕೊಳೋ ತಾಕತ್ತಿರೋ ಕುಡುಕರಿಗೆ ದುಡ್ಡು ಕಿತ್ಕೊಳ್ಳೋದೇನ್ಮಹಾ...."

"ಬಜೆಟ್ಟಲ್ಲಿ ಸ್ಪೆಷಲ್ಲಿನ್ನೇನಿದೆ?"

ಮುಂದಿನ ಪುಟ ನೋಡಿ ...

“ಇಂತಹ ಒಳ್ಳೆ ಬಜೆಟ್ಟೇ ಕಂಡಿಲ್ಲ ಬಿಡಣ್ಣ. ಏಳು ಕೆಜಿ ಅಕ್ಕಿ ಭಾಗ್ಯ ಕೊಟ್ಟಿದಾರೆ. ಪ್ರತಿ ರೈತ ಆತ್ಮಹತ್ಯೆ ಮಾಡಿಕೊಂಡಾಗಲೂ ಬಂದ ಬಂಧು ಬಳಗವೆಲ್ಲ ಹೆಣದ ಬಾಯಿಗೆ ಫ್ರೀ ಅಕ್ಕಿ ಹಾಕಿದ್ದೇ ಹಾಕಿದ್ದು”

“ಅಕ್ಕಿಯನ್ನು ಬದುಕಿರುವವರು ತಿನ್ನೋದಿಲ್ವಾ?”

(ವಿ.ಸೂ. ಓದುಗರಿಗೆ ಕಿರಿಕಿರಿ ತಪ್ಪಿಸಲು ರಾಧೇಶ್ಯಾಮನ ಕನ್ನಡವನ್ನು ಎಡಿಟ್ ಮಾಡಿ, ಶುದ್ಧ ಕನ್ನಡದಲ್ಲಿ ಮುಂದುವರಿಸಲಾಗಿದೆ)

“ಹ್ಹ! ಮನೇಲಿ ನಾಲ್ಕು ಜನ ಇದ್ದೇವೆ. ಏಳ್ನಾಕ್ಲಿಂಪತ್ತೆಂಟು ಕೆಜಿ ಅಕ್ಕಿಯನ್ನ ಮಾರಿದರೆ ಮಿನಿಮಮ್ ಸಾವಿರ ಸಿಗತ್ತೆ. ರುಚಿಯಾದ ಹೆಂಡ ಕುಡಿಯೋದ್ಬಿಟ್ಟು ಹಾಳು ಅಕ್ಕಿ ತಿಂದು ಕೊಲೆಸ್ಟ್ರಾಲ್ ಹೆಚ್ಚಿಸಿಕೊಳ್ಳೋದು ದಡ್ಡತನ” ಕೆಂಚ ಉವಾಚ.

“ಮುಂದುವರಿಸಿ”

“ಕುಡುಕರಿಗೆ ಮಾಂಸ ತಿನ್ನೋದೂಂದ್ರೆ ಖುಷಿ ಅಂತ ಸರ್ಕಾರಕ್ಕೆ ಗೊತ್ತು. ಕುಡುಕರು ಸಾಲ ಹೇಳಿ ಹೋಗ್ತಾರೆ ಅಂತಾನೂ ಗೊತ್ತು. ಸಾಲ ಕೊಟ್ಟು ಮಾಂಸದ ಅಂಗಡಿಯವನಿಗೆ ಲಾಸ್ ಆಗದೆ ಇರಲಿ. ಅಂತ ಅವರಿಗೆ ಲಕ್ಷಾಂತರ ರೂಪಾಯನ್ನ ಸರ್ಕಾರವೇ ಕೊಡತ್ತಂತೆ. ಕಾಲಕ್ಕೆ ತಕ್ಕಂತೆ ಸ್ಕೀಮು!”

“ಅಂದರೆ?”

“ಮಳೆ ಬೆಳೆ ಚೆನ್ನಾಗಿದ್ದಾಗ ಮೇವು, ನೀರು ಚೆನ್ನಾಗಿದ್ದಾಗ ನೀರು, ಆಹಾರ ಪೋಲು ಮಾಡಬೇಡಿ ಅಂತ ಹೇಳಿಕೆ ಕೊಡೋದು ಹೇಗೆ ಸರಿಯೋ, ಹಾಗೆಯೇ ಬರ ಹೆಚ್ಚಾಗಿ ಜಾನುವಾರುಗಳು ಸತ್ತಾಗ ಮಾಂಸ ಪೋಲು ಮಾಡಬೇಡಿ, ಶವಗಳನ್ನು ಹೂಳದೆ ಕಸಾಯಿಖಾನೆಗೆ ಕೊಡಿ ಅಂತ ಹೇಳಿಕೆ ಕೊಡಬೇಕಂತೆ. ಅಂತಹ ಹೇಳಿಕೆ ಕೊಟ್ಟಿಲ್ಲವಾದರೂ ಮಾಂಸದಂಗಡಿಗಳಿಗೆ ಹಣ ಕೊಡುವುದರಿಂದ ಅವರು ಶವ ರವಾನೆ ಮಾಡಿಕೊಳ್ಳಲು ಅನುಕೂಲವಾಗಲೀಂತ ಅನುದಾನ ಕೊಟ್ಟಿದೆ”

“ಮುಂದೆ?”

“ಜಿಲ್ಲೆ, ತಾಲ್ಲೂಕು ಪಂಚಾಯತಿಯ ಜನಪ್ರತಿನಿಧಿಗಳಿಗೆ ಸಂಬಳ ಹೆಚ್ಚು ಮಾಡಿರುವುದೂ ಕುಡುಕರಿಗೆ ಅನುಕೂಲವಾಗಲಿ ಎಂದೇ ಇರಬೇಕು.”

“ಅಂದರೆ ಜನಪ್ರತಿನಿಧಿಗಳು ಕುಡಿಯುತ್ತಾರೆಯೆ?”

“ಛೆ! ದೊಡ್ಡವರ ವಿಷಯ ನನಗ್ಯಾಕೆ! ಅವರ ಬಳಿ ಹೆಚ್ಚು ಹಣ ಸೇರಿದರೆ ಓಟಿಗೆ ಹೆಚ್ಚು ನೋಟು ಕೊಡಕ್ಕೆ ಅನುಕೂಲವಾಗತ್ತೇಂತ ಹಾಗೆ ಹೇಳಿದೆ ಅಷ್ಟೆ.”

“ಬಜೆಟ್‌ನಲ್ಲಿ ಇನ್ನೇನು ವಿಶೇಷ?”

“ಒಂದನೆಯ ತರಗತಿಯಿಂದ ಇಂಗ್ಲಿಷ್ ಕಲಿಸುತ್ತಾರಂತೆ”

“ಅದು ಕುಡುಕರಿಗೆ ಹೇಗೆ ಅನುಕೂಲವಾಗತ್ತೆ?”

“ರಮ್ಮು, ಜಿನ್ನು, ಎಲ್ಲದರ ಲೇಬಲ್ಲು ಒರಿಜಿನಲ್ಲೋ, ಡೂಪ್ಲಿಕೇಟೋ ಅಂತ ಓದಿ ತಿಳಿಯಕ್ಕೆ ಅನುಕೂಲ ಆಗತ್ತೆ. ಬಾರಲ್ಲಿ ಬಿಲ್ಲು ಇಂಗ್ಲಿಷಲ್ಲಿ ಕೊಟ್ಟಾಗಲೂ ಅರ್ಥ ಮಾಡ್ಕೊಳಕ್ಕೆ ಹೆಲ್ಪ್ ಆಗತ್ತೆ. ಈ ಬಜೆಟ್ಟಲ್ಲಿ ಎಲ್ಲಕ್ಕಿಂತ ಸೂಪರ್ ಅಂದರೆ ಇನ್ನುಮುಂದೆ ಬಡವರು ಮನೆ ಕಟ್ಟಿಸುವಾಗ ಅಡಿಗೆಮನೆಯನ್ನೇ ಕಟ್ಟಿಸಬೇಕಾಗಿಲ್ಲ. ಗ್ಯಾಸ್ ಬೆಲೆ ಏರಿದರೂ ಹೆದರಬೇಕಾಗಿಲ್ಲ”

“ಯಾಕೆ?”

“ಜೈ ನಮ್ಮ ಕ್ಯಾಂಟೀನ್. ನಾಲ್ಕು ಜನರ ಫ್ಯಾಮಿಲಿ ದಿನಕ್ಕೆ ನೂರು ರೂಪಾಯಿ ಕೊಟ್ಟರೆ ಫುಲ್ ಮೀಲ್ಸ್, ಫುಲ್ ಟಿಫನ್. ಸರ್ಕಾರ ಇದಕ್ಕೂ ಅನುದಾನ ನೀಡಿ ಫ್ಯಾಮಿಲಿಗೆ ಮೂರುಸಾವಿರ ಮಂತ್ಲಿ ಅಲೊವೆನ್ಸ್ ಕೊಟ್ಟಿದ್ದಿದ್ದರೆ ಇನ್ನೂ ಸೂಪರ್ ಆಗಿರ್ತಿತ್ತು”

“ಬಜೆಟ್‌ನಲ್ಲಿ ನಿಮಗೆ ತುಂಬಾ ಇಷ್ಟವಾದ ಅಂಶ ಯಾವುದು?”

“ಕುಡುಕ ಇದ್ದಲ್ಲಿ ರೋಗ ಇರತ್ತೆ; ಕುಡುಕನಿಂದ ಮನೆಯವರಿಗೂ ಬಿಪಿ, ಡಯಾಬಿಟಿಸ್, ಹಾರ್ಟ್ ಪ್ರಾಬ್ಲಮ್ ಬರತ್ತೆ ಅಂತ ಸರ್ಕಾರ ತಿಳ್ಕೊಂಡು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನ ಕಟ್ಟಿಸ್ತೀವಿ ಅಂದಿದ್ದು”

“ಬಜೆಟ್‌ನಲ್ಲಿ ಇನ್ನೂ ಏನಾದರೂ ಇರಬೇಕಾಗಿತ್ತು ಅಂತ ನಿಮಗೆ ಅನಿಸತ್ತಾ?”

“ಹ್ಞೂಂ. ನಿಂಬೆ, ಆಲೂಗೆಡ್ಡೆ, ಮಾವಿನಕಾಯಿ ಬೆಲೆ ಇಳಿಸಬೇಕಾಗಿತ್ತು”

“ಯಾಕೆ?”

“ನೆಂಜಿಕೊಳ್ಳುವ ಉಪ್ಪಿನಕಾಯಿ, ಚಿಪ್ಸ್ ಬೆಲೆ ಕಡಿಮೆ ಮಾಡಲಿಕ್ಕೆ”

“ಥ್ಯಾಂಕ್ಸ್ ಕೆಂಚಯ್ಯನವರೇ, ಮುಂದಿನ ಸಂದರ್ಶನ ಖೂನಿ ಕರೀಮಣ್ಣನವರೊಡನೆ....”

“ಒಂದ್ನಿಮಿಷ... ಇನ್ನೂ ಒಂದು ಡಿಮ್ಯಾಂಡ್ ಇದೆ”

“ಏನು?”

“ಕುಡುಕರು ಫುಲ್ ಟೈಟ್ ಆದಾಗ ಅವರಿಗೆ ಡೋರ್ ಡೆಲಿವರಿ ಭಾಗ್ಯ ನೀಡಬೇಕಾಗಿತ್ತು”

ಕೆಂಚ ಹೇಳುತ್ತಲೇ ಇದ್ದ. ರಾಧೇಶ್ಯಾಮನ ಕ್ಯಾಮರಾ ಆಗಲೇ ಕರೀಮಣ್ಣನ ಮೇಲೆ ಪ್ಯಾನ್ ಇನ್ ಆಗಿತ್ತು. ▪

ನಾವೆಷ್ಟು ಸಿರಿವಂತರು

ಕನಕಾಪುರ ನಾರಾಯಣ

ದೊಡ್ಡ ಪಟ್ಟಣದ ಬಲು ಶ್ರೀಮಂತ ಕುಟುಂಬದ ಒಬ್ಬ ತಂದೆ ತನ್ನ ಮಗನಿಗೆ ಬಡತನದ ಅರಿವಾಗಲೆಂದು ದೂರದ ಹಳ್ಳಿಗೆ ಕರೆದೊಯ್ದ.ಅಲ್ಲಿ ನಾಲ್ಕಾರು ದಿನ ಕಳೆದು ಮರಳಿ ಮನೆಗೆಬಂದ ನಂತರ ತಂದೆ ಮಗನನ್ನು ಕೇಳಿದ "ಹೇಗಿತ್ತು ಮಗೂ ಹಳ್ಳಿ ಜೀವನ? ನೋಡಿದೆಯಾ ಬಡತನ ಅಂದರೆ ಏನೂ ಅಂತಾ?"ಎಂದ.ಮಗ "ಹೌದು"ಎಂದು ಸಪ್ಪೆಯಾಗಿ ಉತ್ತರಿಸಿದ.ತಂದೆ ಮತ್ತೆ"ಇದರಿಂದ ಏನು ಪಾಠ ಕಲಿತೆ ನೀನು?"ಎಂದು ಪ್ರಶ್ನಿಸಿದ.ಅದಕ್ಕೆ ಮಗ"ಹೌದಪ್ಪಾ ನೋಡಿದೆ ನಮ್ಮ ಮನೆಯಲ್ಲಿ ಒಂದು ನಾಯಿಯಿದೆ ಅವರಿಗೆ ಆರೆಂಟು ಇವೆ,ನಮಗೆ ಈಜಲು ಪುಟ್ಟ ಪೂಲ್ ಇದೆ ಅವರಿಗೆ ದೊಡ್ಡ ಕೆರೆಯೇ ಇದೆ,ನಮಗೆ ಅಂಗಳದಲ್ಲಿ ವಿದೇಶಿ ಲಾಟಿನ್ ಇವೆ,ಅವರಿಗೆ ನಕ್ಷತ್ರಗಳೇ ಇವೆ,ನಮಗೆ ಆಡಲು ಬೇಲಿಯವರೆಗೆ ಅಂಗಳ ಇದೆ ಅವರಿಗೆ ಕಣ್ಣು ಹರಿಯುವಷ್ಟೂ ಅಂಗಳವೇ,ನಮಗೆ ದೊಡ್ಡ ಮನೆಯಿದೆ ಅವರಿಗೆ ತೋಟ,ಹೊಲ,ಗದ್ದೆ,ಬಯಲು ಎಲ್ಲಾ ಇವೆ,

ನಮ್ಮನ್ನು ರಕ್ಷಿಸಲು ಸುತ್ತಲೂ ಗೋಡೆಗಳಿವೆ ಅವರ ಸುತ್ತಲೂ ಬರೀ ಗೆಳೆಯರೇ ಇದ್ದಾರೆ".ಇಷ್ಟು ಕೇಳಿದ ತಂದೆಯ ಮುಖ ಮುದುಡಿತು.ಮಗ ಮತ್ತೊಂದು ಮಾತು ಹೇಳಿದ"ಅಪ್ಪಾ ತುಂಬಾ ಥ್ಯಾಂಕ್ಸ್ ಅಪ್ಪ ನಾವೆಷ್ಟು ಬಡವರೆಂದು ನನಗೆ ಈಗ ಅರಿವು ಮಾಡಿಕೊಟ್ಟಿದ್ದಕ್ಕೆ."ಎಂದು ಹೇಳಿದ.

ನೀತಿ: ಪ್ರತಿಯೊಂದು ವಿಷಯವನ್ನು ಬೇರೊಂದು ದೃಷ್ಟಿಯಿಂದಲೂ ನೋಡಬಹುದು, ಮಕ್ಕಳಿಗೆ ಅರಿವು ಮೂಡಿಸುವುದು ಸುಲಭದ ಕೆಲಸವಲ್ಲ.▪

ಚಿಲುಮೆಯ ಎಲ್ಲಾ ಸಂಚಿಕೆಗಳೂ ಸೇರಿದಂತೆ ಕಥೆ, ಕವನ, ಹಾಸ್ಯ, ಆರೋಗ್ಯ ... ಇನ್ನಿತರ ಸಾಹಿತ್ಯಕ್ಕೆ ಭೇಟಿಕೊಡಿ

HTTP://WWW.SUGAMAKANNADA.COM/

ಹೆಸರುಕಾಳು ಹುಳಿ / ಪದಂಜಿ ಕೊದ್ದೆಲ್

ರೆಸಿಪಿ ಕೊಡ್ತೀರಾ!

ಬೇಕಾಗುವ ಸಾಮಗ್ರಿಗಳು

- ಹೆಸರುಕಾಳು - ಒಂದು ಲೋಟ
- ತೆಂಗಿನಕಾಯಿತುರಿ - ಅರ್ಧ ಲೋಟ
- ಕರಿಮೆಣಸು - ಏಳು ಎಂಟು/
- ಜೀರಿಗೆ, ಉದ್ದು, ಹುಳಿಮಾವಿನಪುಡಿ - ಅರ್ಧ ಚಮಚ
- ಬೆಲ್ಲದ ಪುಡಿ - ಎರಡು ಟೀಸ್ಪೂನ್
- ರುಚಿಗೆ ಉಪ್ಪು

ಮಾಡುವ ವಿಧಾನ

- ಹೆಸರುಕಾಳನ್ನು ಮೂರುಗಂಟೆ ನೀರಿನಲ್ಲಿ ನೆನೆಸಿ, ತೊಳೆಯಿರಿ.
- ನಂತರ ಮೂರು ಲೋಟ ನೀರಿನಲ್ಲಿ ಬೇಯಿಸಿ.
- ಕರಿಮೆಣಸು, ಜೀರಿಗೆ, ಉದ್ದನ್ನು ಹುರಿಯಿರಿ.
- ಕಾಯಿತುರಿ, ಹುಳಿಮಾವಿನಪುಡಿ, ಬೆಲ್ಲ, ಉಪ್ಪಿನೊಂದಿಗೆ ಹುರಿದು ಧಾನ್ಯಗಳನ್ನು ನುಣ್ಣಗೆ ರುಬ್ಬಿ.
- ರುಬ್ಬಿದ ಮಸಾಲೆಯನ್ನು ಬೆಂದ ಹೆಸರುಕಾಳಿಗೆ ಹಾಕಿ ಕುದಿಸಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ಒಗಟು

೧. ಹತ್ತಲಾರದ ಮರಕ್ಕೆ ಹತ್ತುತ್ತಾನೆ ಕರಿಯಣ್ಣ

೨. ಸುತ್ತಮುತ್ತ ಗರಿಕೆ, ನಡುವೆ ಕುಡಿಕೆ

ಉತ್ತರಕ್ಕೆ ಪುಟ ೧೭ ನೋಡಿ

ಕನ್ನಡ ಭಾಷೆ ...

ಅಮ್ಮ ಕಲಿಸಿದ ಕನ್ನಡ ಬಾಷೆ
ಕನ್ನಡವೆಂದರೆ ನನಗಾಸೆ!

ಮನೆಯಲಿ ಕನ್ನಡ
ಮನದಲಿ ಕನ್ನಡ
ಕನ್ನಡ ನೆಲದಲೆ ಹಾಡುವೆನು
ಕನ್ನಡ ನೆಲದಲೆ ಆಡುವೆನು!

ನಾ ಕುಡಿಯುವ ನೀರು ಕಾವೇರಿ
ನಾ ಹಾಡುವ ರಾಗವು ಸಾವೇರಿ!
ಕನ್ನಡವೆಂದರೆ ಹೊನ್ನುಡಿಯು
ಕನ್ನಡವೆಂದರೆ ಮುನ್ನುಡಿಯು!

ಅಮ್ಮ ಕಲಿಸಿದ ಕನ್ನಡ ಬಾಷೆ
ಕನ್ನಡವೆಂದರೆ ನನಗಾಸೆ!

ಗೆಳೆಯರೆ ಬನ್ನಿರಿ ನಲಿಯೋಣ
ಕನ್ನಡ ಪಾಠವ ಕಲಿಯೋಣ
ಕನ್ನಡವನ್ನೆ ನುಡಿಯೋಣ
ಕನ್ನಡ ನಾಡನು ಬೆಳಗೋಣ

ಅಮ್ಮ ಕಲಿಸಿದ ಕನ್ನಡ ಬಾಷೆ
ಕನ್ನಡವೆಂದರೆ ನನಗಾಸೆ!

ಕನ್ನಡದಲೆ ನಾ ಬರೆಯುವೆನು
ಕನ್ನಡ ಗೆಳೆಯರ ಪಡೆಯುವೆನು
ಹಗಲು ಇರುಳು ದುಡಿಯುವೆನು
ಮುಗಿಲನು ಮೀರಿ ಬೆಳೆಯುವೆನು

ಅಮ್ಮ ಕಲಿಸಿದ ಕನ್ನಡ ಬಾಷೆ
ಕನ್ನಡವೆಂದರೆ ನನಗಾಸೆ!

-ಮಾಲು, ಅಡಿಲೈಡ್

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"


ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

SRI KRISHNA TRAVEL
Travel with a Smile
Contact Mr Sudheendra Rao EMAIL
Mobile 0415 291 723

choice HOME LOANS
Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.
Contact Mr Umesh EMAIL
Mobile 0401 034 456

AUSTINDIA SANGAM TRANSPORT
Contact Mr Eranna Gotyal EMAIL
Mobile 0404 215 605

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಬಾದಾಮಿಯ ಚಾಲುಕ್ಯರ ಹೊರತಾಗಿ ಮತ್ತೊಂದು ಚಾಲುಕ್ಯ ವಂಶದ ರಾಜಧಾನಿ.

೨. ಕೆಂಪೇಗೌಡರನ್ನು ನಾಡಪ್ರಭು ಎಂದು ಹೇಳುವಾಗ ಸೇರಿಕೊಳ್ಳುವ ಊರು?

೩. ಬಿಜಾಪುರದ ಸುಲ್ತಾನರು, ಮರಾಠಿಗರು, ಹೈದರ್ ಅಲಿ, ಟೀಪು ಮುಂತಾದವರು ಆಳಿದ ತುಮಕೂರು ಜಿಲ್ಲೆಯ ಪ್ರಮುಖ ಐತಿಹಾಸಿಕ ಪಟ್ಟಣ.

೪. ತಿರುಮಕೂಡಲು ನರಸೀಪುರ ತಾಲ್ಲೂಕಿನಲ್ಲಿರುವ ಐತಿಹಾಸಿಕ ಪ್ರಸಿದ್ಧ ಊರು, ಬೇಕರಿಯ ತಿಂಡಿಯೊಂದನ್ನು ನೆನಪಿಸುತ್ತದೆ.

೫. ಬಾದಾಮಿಯ ಮತ್ತೊಂದು ಹೆಸರು ಗಣೇಶನೊಂದಿಗೆ ಪ್ರಸಿದ್ಧಿ ಪಡೆದಿದೆ.

೬. ಕಾಡಿನ ದೇವತೆ, ಶಿವನ ಸತಿಯ ಊರು.

೭. ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕಿನ ಈ ಹೋಬಳಿಯಲ್ಲಿ ಶಿವನ ಸೈನ್ಯವು ಬೀಡು ಬಿಟ್ಟಿತ್ತೇ?

ಮುಖ್ಯ ಪದ: ಕನ್ನಡದ ಮೊದಲ ರಾಜವಂಶ

ನಿಮ್ಮ ಉತ್ತರ ಇಮೇಲ್ ಮಾಡಿ, (horanadachilume@gmail.com)

ಡಿಸೆಂಬರ್ ೨೦ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಅಕ್ಟೋಬರ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ರಾಜಿ ಜಯದೇವ್, ಸಿಡ್ನಿ
- ವತ್ಸಲಾ ದ್ವಾರಕನಾಥ್, ಕೆಂಗೇರಿ
- ಉಮಾ ಕಟ್ಟಿ
- ಗಣೇಶ್ ಕುಮಾರ್, ಅಬ್ಬಿಗೆರೆ

೧. ಜನಿಸುವ ಮೊದಲು ಶಿಶುವಿಗೆ ನವಮಾಸಗಳು ಆಶ್ರಯ ನೀಡುವ ತಾಣ.

ಗ	ರ್ಭಾ	ಶ	ಯ

೨.ಆಕಳನ್ನೊಳಗೊಂಡ ಮುಖ.

ವ	ದ	ನ

೩.ದೀರ್ಘಕಾಲ ಮಳೆ ಇಲ್ಲದಾಗ ಬೇಡವೆಂದರೂ ಬರುವುದು?

ಬ	ರ

೪.ಈ ಬೇಗೆಗೆ ಕಾರಣ ಬಿಸಿಲಿನ ತಾಪವಲ್ಲ, ದುಃಖ.

ಸಂ	ತಾ	ಪ

೫. ಮೋಡದ ನಾಡಿನ ಬಾಗಿಲಿಗೆ ಕಾಮನಬಿಲ್ಲು ಕಟ್ಟಿದ್ದೇನು?

ಕ	ಮಾ	ನು

೬.ಮೊದಲ ಬಾರಿಗೆ ನೋಡಿದವನಿಗೆ ಗರ ಬಡಿಸಿದ ಅಗಾಧವಾದ ಜಲರಾಶಿ.

ಸಾ	ಗ	ರ

ಮಾಡಬೇಕಾದ ಪದ:-

'ಆ ಸಮಯಕ್ಕೆ ತಕ್ಕಂತೆ' ಎಂಬುದನ್ನು ಒಂದೇ ಪದದಲ್ಲಿ ಹೀಗೂ ಹೇಳಬಹುದು.

ಸಂ	ದ	ರ್ಭಾ	ನು	ಸಾ	ರ

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

☺ http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ಜಾಣ ಕರ್ನಾಟಕ

೧. ನವೆಂಬರ್ ೨೪, ೨೫, ೨೬ ರಂದು ನಡೆದ ಕನ್ನಡ ಸಾಹಿತ್ಯ ಸಮ್ಮೇಳನ ಎಷ್ಟನೆಯದು, ಹಾಗೂ ಎಲ್ಲಿ ನಡೆಯಿತು.

೨. ಈ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದವರು ಯಾರು? ಕನ್ನಡ ಸಾಹಿತ್ಯ ಪರಿಷತ್ತಿನ ಈಗಿನ ಅಧ್ಯಕ್ಷರು ಯಾರು?

ಸರಿ ಉತ್ತರಕ್ಕೆ ಪುಟ ೨೩ ನೋಡಿ

ಒಗಟು - ಉತ್ತರ

೧. ಕರಿ ಇರುವೆ ೨. ಕಣ್ಣುಗುಡ್ಡೆ

ಹಾಸ್ಯ ಚಿಲುಮೆ

ಪ್ರಿನ್ಸಿಪಾಲ್;ಕಾಲೇಜಿಗೆ ಯಾಕೋ ಲೇಟಾಗಿ ಬಂದೆ?

ವಿದ್ಯಾರ್ಥಿ:ಬೈಕ್ ಪಂಚರ್ ಆಗೋಯ್ತು ಸಾರ್..

ಪ್ರಿನ್ಸಿಪಾಲ್; ಅದ್ಯಾಕೋ ಬೈಕಲ್ಲೇ ಬರಬೇಕು? ಬಸ್ ಇತ್ತಲ್ಲಾ

ವಿದ್ಯಾರ್ಥಿ:ಇತ್ತೂ ಸಾರ್ ಅದ್ರೆ ನಿಮ್ಮ ಮಗಳು ಕೇಳ್ಬೇಕಲ್ಲ

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ - ಸುಗಮ ಕನ್ನಡ ಕೂಟ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ರಚನೆ: ಲತಾ ಹೇಮಂತ್

ಕಥೆಯಾದವನು – ಭಾಗ ೩

ಲೇಖಕರು:
ನಾಗಶೈಲ ಕುಮಾರ್

ರೈಲು ಮುಂದೆ ಚಲಿಸಿದಂತೆಲ್ಲಾ, ನನ್ನ ನೆನಪುಗಳು ಸತ್ಯನ ಹಿಂದೆಯೇ ಓಡುತಿತ್ತು.

ಸಮೀಪಿಸುತ್ತಿದ್ದ ಸಿದ್ಧಗಂಗೆ ಬೆಟ್ಟವನ್ನು ನೋಡುತ್ತಿದ್ದಂತೆ, ಸತ್ಯನೊಡನೆ ಸಿದ್ಧಗಂಗೆ, ಶಿವಗಂಗೆ, ದೇವರಾಯನದುರ್ಗ, ಮಧುಗಿರಿ, ಎಂದೆಲ್ಲಾ ಸುತ್ತಿದ್ದು ನೆನಪಾಯಿತು. ಆಗ ನಾಲ್ಕು ದಿನ ಅವರ ಮನೆಯಲ್ಲೇ ಉಳಿದಿದ್ದೆ. ನನಗೆ ರಾಜೋಪಚಾರ ನಡೆಸಿದ್ದ, ಅವನಷ್ಟೇ ಆಲ್ಲ, ಅವನ ಮನೆಯವರು ಕೂಡ.

ನನಗೆ ಎಲ್ಲಕ್ಕಿಂತ ಹೆಚ್ಚಿಗೆ ಸೋಜಿಗವೆನಿಸಿದ ವಿಷಯವೆಂದರೆ, ಪಕ್ಕದ ಬೆಂಗಳೂರಿನಲ್ಲೇ ಇದ್ದು, ಪ್ರತಿವಾರವೂ ಮನೆಗೆ ಓಡೋಡಿ ಬರುವ ಸತ್ಯನನ್ನು, ಹಲವಾರು ವರ್ಷಗಳ ನಂತರ, ವಿದೇಶದಿಂದ ಬಂದಿರುವ ಮಗನಂತೆ, ಅವನ ಮೇಲೆ ಅವರುಗಳು ತೋರುತ್ತಿದ್ದ ಪ್ರೀತಿ, ವಹಿಸುತ್ತಿದ್ದ ಕಾಳಜಿ. ಅವನು ಕೂಡ ಅವರನ್ನೆಲ್ಲಾ ಎಷ್ಟೋ ದಿನಗಳಿಂದ ಅಗಲಿರುವವನಂತೆ ವರ್ತಿಸುತ್ತಿದ್ದ, ಅಷ್ಟೇ ಆಲ್ಲ, ತಂದೆ ತಾಯಿಯರನ್ನು ದೇವರೆಂದೇ ಭಾವಿಸಿದ್ದ. ಅವರ ಮನೆಯ ರಾಜಾತಿಥ್ಯ ಸ್ವೀಕರಿಸಿ, ಹಿಂದಿರುಗಿ ಬರುವಾಗ, ತಿಪಟೂರಿನಿಂದ ಕೊಬ್ಬರಿ, ಅವರದೇ ತೋಟದ ಮಾವು, ಹಲಸು ಮತ್ತೆ ಬಗೆಬಗೆಯ ತಿಂಡಿಗಳು, ಎಲ್ಲವನ್ನೂ ಬುಟ್ಟಿಗಟ್ಟಲೆ ತುಂಬಿ, ಅವರದೇ ಕಾರಿನಲ್ಲಿ ನನ್ನನ್ನು ಮನೆ ತಲುಪಿಸಿದ್ದರು. ಅವರ ಮನೆಯ ವಾತಾವರಣ, ಸುಸಂಸ್ಕೃತ ನಡವಳಿಕೆ ಎಲ್ಲ ನೋಡಿ ನನಗೆ ಸತ್ಯನ ಬಗ್ಗೆ ಒಂದು ರೀತಿಯ ಗೌರವ ಬೆಳೆದಿತ್ತು.

ನಮ್ಮ ಕಛೇರಿಗೆ ಹೊಸಬನಾಗಿದ್ದ ಸತ್ಯ, ಬೇಗನೆ ಎಲ್ಲರ ವಿಶ್ವಾಸ ಗಳಿಸಿದ್ದ. ಕೆಲಸದಲ್ಲಿ ಮುಂದು, ಬುದ್ಧಿವಂತಿಕೆಯಲ್ಲಿ ಮುಂದು, ಸಹಾಯ ನೀಡುವುದರಲ್ಲಿ ಮುಂದು, ಹಾಡು, ನಾಟಕ, ಹೀಗೆ ಏನೇ ಇರಲಿ ಅಲ್ಲಿ ಸತ್ಯನೇ ಮೊದಲು. ಹೊಸಬ ಮುಂದೆ ಬಂದನೆಂದು ಯಾರೂ ಅಸೂಯೆ ಪಡುವ ಹಾಗೇ ಇರಲಿಲ್ಲ. ಏಕೆಂದರೆ, ತನ್ನ ನಯವಿನಯದ ನಡೆನುಡಿಗಳಿಂದ ಎಲ್ಲರ ವಿಶ್ವಾಸಕ್ಕೆ ಪಾತ್ರನಾಗಿದ್ದ. ಯಾರ ಮನೆಯಲ್ಲಿ ಯಾವುದೇ ಸಮಾರಂಭವಿರಲಿ, ಆಲ್ಲಿ ಸತ್ಯನ ಓಡಾಟ ಎದ್ದು ಕಾಣುತ್ತಿತ್ತು. ಶುಭ ಸಮಾರಂಭಗಳಾದರೆ, ತೋರಣ ಕಟ್ಟುವುದರಿಂದ ಹಿಡಿದು, ರಂಗವಲ್ಲಿ, ಅಲಂಕಾರ, ಅಡುಗೆ, ಶಾಸ್ತ್ರಗಳು, ಎಲ್ಲದರಲ್ಲಿಯೂ ಅವನ ಸಲಹೆ ಸೂಚನೆಗಳು ಇರುತ್ತಿತ್ತು.

ಯಾರಿಗಾದರೂ ಕಾಯಿಲೆ ಕಸಾಲೆಯೆಂದರೆ,ಆಸ್ಪತ್ರೆ ಸುತ್ತಾಟ, ಉಪಚಾರ, ಊಟ, ಔಷಧಿ ಪಥ್ಯೆಗಳನ್ನು ಪೂರೈಸುವುದಷ್ಟೇ ಅಲ್ಲದೆ ಮನೆಯವರಿಗಿಂತ ಹೆಚ್ಚಾಗಿ ಆರೈಕೆ ಮಾಡುತ್ತಿದ್ದ. ಇನ್ನು ಸ್ನೇಹಿತರು ಯಾರ ಮನೆಯಲ್ಲಾದರು ಸಾವು ಸಂಭವಿಸಿದರೆ, ಅಲ್ಲಿ ಇವನದೊಂದು ಹೆಗಲು ಇದ್ದೇ ಇರುತ್ತಿತ್ತು.

ಇಷ್ಟೆಲ್ಲಾ ಮಾಡಿದರೂ ಯಾರಿಂದಲೂ ಏನನ್ನೂ ಹಿಂದಿರುಗಿ ಬಯಸುತ್ತಿರಲಿಲ್ಲ. "ಏನೋ, ಭಗವಂತ ಮಾಡೋ ಶಕ್ತಿ ಕೊಟ್ಟಿದ್ದಾನೆ, ಮಾಡ್ತೀನಿ ಅಷ್ಟೆ. ಅದರಲ್ಲಿ ಏನಾದ್ರು ಒಳ್ಳೇತನ ಇದ್ರೆ, ಅದು ದೇವರಂತ ತಂದೆತಾಯಿಗೆ ಮಗ ಆಗಿ ಹುಟ್ಟಿರೋದೆ ಕಾರಣ" ಎಂದು ನಮ್ರನಾಗಿ ನುಡಿಯುತ್ತಿದ್ದ. ಇನ್ನು ಕೆಲಸದ ವಿಷಯದಲ್ಲಿ ಹೇಳುವ ಹಾಗೇ ಇಲ್ಲ. ಎಲ್ಲದರಲ್ಲೂ ಅಚ್ಚುಕಟ್ಟು, ಸಮಯ ಪರಿಪಾಲನೆ ಮತ್ತು ಮಾಡುವ ಕೆಲಸ ಸಂಪೂರ್ಣ ಪಕ್ಕ. ತನ್ನ ಕೆಲಸ ಮುಗಿಸಿ ಇತರರಿಗೂ ಸಹಾಯ ಮಾಡಲು ಸದಾ ಸಿದ್ಧನಾಗಿರುತ್ತಿದ್ದ.

ಶುಕ್ರವಾರಗಳಂದು ಕಚೇರಿಯಲ್ಲಿ ಪೂಜೆ ಮಾಡುತ್ತಿದ್ದೆವು. ಸತ್ಯ ಬರುವವರೆಗೂ ನಾನೇ ಮಾಡುತ್ತಿದ್ದೆ. ಆದರೆ ಒಮ್ಮೆ ಸ್ನೇಹಿತರ ಮನೆಯಲ್ಲಿ ಸತ್ಯನಾರಾಯಣ ಪೂಜೆ, ಮಾಡಿಸಬೇಕಾಗಿದ್ದ ಪುರೋಹಿತರು ನಾಪತ್ತೆ. ಆತಂಕಗೊಂಡಿದ್ದ ಮನೆಯವರು ತಲೆಯಮೇಲೆ ಕೈ ಹೊತ್ತು ಕುಳಿತಿದ್ದಾಗ,

"ಗೋಪಾಲಣ್ಣ, ನೀವ್ಯಾಕ್ ಇಷ್ಟು ಗಾಬರಿ ಮಾಡ್ಕೋತೀರ? ಏನೋ ತೊಂದ್ರೆ ಆಗಿರ್ಬೇಕು ಅಯ್ನೋರ್ಗೆ, ಸ್ವಲ್ಪ ಕಾದು ನೋಡೋಣ ಇರಿ", ಎಂದು ಸಮಾಧಾನ ಮಾಡಿದ ಸತ್ಯ.

"ಅಲ್ಲ, ಅಪರೂಪಕ್ಕೆ ಪೂಜೆ ಇಟ್ಕೊಂಡ್ ಇರುವಾಗಲೇ ಹೀಗಾಗ್ಬೇಕ?, ಎಲ್ಲಿಂದ ಅಂತ ಈಗ ಬೇರೆ ಪೂಜಾರಪ್ಪನ್ನ ಹುಡುಕ್ಕಂಡ್ ಬರೋದು. ಏನಾಯ್ತು ಅಂತ ಮುಂಚೇನೆ ತಿಳಿಸ್ಬಾರದ ಇವರು. ಬೇರೆಯವರನ್ನಾದ್ರೂ ನೋಡ್ಕೋಬೌದಿತ್ತು", ಎನ್ನುತ್ತಾ ಗೋಪಾಲಣ್ಣ, ಅತ್ತಿಂದಿತ್ತ ಓಡಾಡುತ್ತಿದ್ದ.

ಅಷ್ಟು ಹೊತ್ತಿಗೆ ಅಲ್ಲಿಗೆ ಬಂದ ಹುಡುಗ, "ನಮ್ಮ ತಾತಂಗೆ ತುಂಬಾನೇ ಮೈಲಿ ಹುಷಾರಿಲ್ಲ, ಇವತ್ತು ಬರಕ್ಕೆ ಆಗಲ್ಲ ಅವರಿಗೆ, ನಿಮಗೆ ಹೇಳಿಬಿಟ್ಟು ಬಾ ಎಂದರು", ಎಂದು ಹೇಳಿ ಹೋದಾಗ, ಗೋಪಾಲಣ್ಣನ ಹೆಂಡತಿ ಅಳಲು ಆರಂಭಿಸಿಯೇ ಬಿಟ್ಟರು.

"ಅಕ್ಕ, ಪೂಜೆ ಇಟ್ಟುಕೊಂಡು ಅದ್ಯಾಕೆ ಅಳ್ತೀರಾ, ಗೋಪಾಲಣ್ಣ, ಎಲ್ಲಿ ಒಂದು ಒಗೆದ ಪಂಚೆ ಇದ್ದರೆ ಕೊಡಿ", ಎನ್ನುತ್ತಾ, ಎಲ್ಲರೂ ನೋಡುತ್ತಿರುವಂತೆ, "ಶುಕ್ಲಾಂಬರಧರಂ....." ಎನ್ನುತ್ತಾ ಪೂಜೆಯನ್ನು ಪ್ರಾರಂಭಿಸಿದವನು, ಗಣೇಶನ ಪೂಜೆ, ನವಗ್ರಹ ಪೂಜೆ, ಪ್ರಾಣಪ್ರತಿಷ್ಠಾಪನೆ, ಕಥೆ, ನೈವೇದ್ಯ, ಮಹಾಮಂಗಳಾರತಿ ಎಂದೆಲ್ಲಾ ಸಾಂಗವಾಗಿ ಮಾಡಿ ಮುಗಿಸಿದಾಗ, ನಾವೆಲ್ಲಾ ನಿಬ್ಬೆರಗಾಗಿದ್ದೆವು.

ಗೋಪಾಲಣ್ಣ ದಂಪತಿಗಳಂತೂ ಗದ್ಗದಿತರಾಗಿ, " ಸತ್ಯಣ್ಣ, ನೀವೇ ಇವತ್ತು ನಮ್ಮ ಪಾಲಿನ ದೇವರಾಗಿ ಬಂದ್ರಿ. ಇಷ್ಟು ನಿಷ್ಠೆಯಿಂದ ಇದುವರೆವಿಗೂ ಯಾರೂ ಪೂಜೆ ಮಾಡಿಸಿರಲಿಲ್ಲ," ಎನ್ನುತ್ತಾ ಕಾಲಿಗೇ ಬೀಳಲು ಹೋದರು.

ಮುಂದಿನ ಪುಟ ನೋಡಿ ...

ಅದಾದ ನಂತರ ಕಚೇರಿಯಲ್ಲಿನ ಶುಕ್ರವಾರದ ಪೂಜೆಯ ಉಸ್ತುವಾರಿಯನ್ನು ಅವನಿಗೇ ವಹಿಸಿದೆವು. ಕಚೇರಿಯಲ್ಲಿದ್ದ ದೇವರ ಫೋಟೋಗೆ ಒಂದು ಹೂವಿನ ಹಾರ ಹಾಕಿ, ಹಣ್ಣು ನೈವೇದ್ಯ ಮಾಡಿ, ಮಂಗಳಾರತಿಯೊಂದಿಗೆ ಹದಿನೈದು ಇಪ್ಪತ್ತು ನಿಮಿಷಗಳ ಪೂಜೆ. ಕಡೆಯಲ್ಲಿ ಎಲ್ಲರೂ ತಟ್ಟೆಗೆ ದುಡ್ಡು ಹಾಕುತ್ತಿದ್ದರು. ನಾನು ಪೂಜೆ ಮಾಡುವಾಗ ಆದರ ಹಣವನ್ನೆಲ್ಲಾ ಒಟ್ಟಾಗಿ ಸೇರಿಸಿ, ಯಾರಾದರೂ ತಿರಪತಿಗೋ, ಧರ್ಮಸ್ಥಳಕ್ಕೋ ಹೋದಾಗ ಕಳುಹಿಸುತ್ತಿದ್ದೆವು.

ಸತ್ಯ ಪೂಜೆ ಆರಂಭಿಸಿದ ನಂತರ ಒಂದು ದಿನ ನನ್ನನ್ನು ಆ ಹಣವನ್ನೆಲ್ಲಾ ಏನು ಮಾಡಬೇಕು ಎಂದು ಕೇಳಿದ. ಆ ಶುಕ್ರವಾರ ಪೂಜೆಯ ನಂತರ ಬಂದ ಹಣವನ್ನು ತಾನೇ ಇಟ್ಟುಕೊಂಡ. ಶನಿವಾರ ಕಚೇರಿಯ ನಂತರ, " ಅಣ್ಣ, ನನ್ನ ಜೊತೆ ಬಾ ಸ್ವಲ್ಪಎಂದು ಕರೆದುಕೊಂಡು ಹೊರಟ. ಎಲ್ಲಿಗೆ ಎಂದರೆ ಹೇಳಲಿಲ್ಲ. ಒಂದು ಹೋಟೆಲಿನಲ್ಲಿ ತನ್ನ ಚೀಲದಲ್ಲಿದ್ದ ಹಣದಿಂದ ಒಂದಷ್ಟು ತಿಂಡಿಗಳ ಪೊಟ್ಟಣಗಳನ್ನು ಕಟ್ಟಿಸಿಕೊಂಡು, ಹತ್ತಿರದಲ್ಲೇ ಇದ್ದ ಶನೀಶ್ವರನ ಗುಡಿಯ ಬಳಿ ಬಂದಾಗ ನನಗೆ ಕುತೂಹಲವಾಯಿತು.

ದೇವಸ್ಥಾನದ ಬಾಗಿಲ ಬಳಿ ಉದ್ದಕ್ಕೂ ಆ ಕಡೆ ಈ ಕಡೆ ಭಿಕ್ಷುಕರು ಕುಳಿತಿದ್ದರು. ತಾನು ತಂದಿದ್ದ ತಿಂಡಿಗಳನ್ನು ತೀರಾ ವಯಸ್ಸಾದವರು, ಅಂಗವಿಕಲರಿಗೆ ಹಂಚಿದ.

"ನೋಡು ಸದಣ್ಣ, ಇದು ನೆನ್ನೆ ಮಂಗಳಾರತಿಯಲ್ಲಿ ಸೇರಿದ್ದ ಹಣ. ಈಗ ನಿಜವಾಗಿ ದೇವರನ್ನು ಸೇರಿತು ನೋಡು. ನನ್ನ ಪ್ರಕಾರ ಇದೇನೆ ದೇವರಿಗೆ ಅರ್ಪಿಸುವ ರೀತಿ. ನಾನು ಮಾಡಿದ್ದು ಸರಿ ಇಲ್ಲ ಅನಿಸಿದರೆ ಹೇಳು. ಇಷ್ಟು ದಿನ ನೀವೆಲ್ಲಾ ಹೇಗೆ ಮಾಡುತ್ತಿದ್ದೀರೋ ಹಾಗೆಯೇ ನಾನೂ ಮುಂದುವರೆಸುತ್ತೇನೆ".

ನನಗೆ ಆಶ್ಚರ್ಯವಾಗಿತ್ತು, ಇಷ್ಟು ಚಿಕ್ಕ ವಯಸ್ಸಿನಲ್ಲೇ ಎಷ್ಟೊಂದು ಪ್ರಬುದ್ಧತೆ. "ಇಲ್ಲ ಸತ್ಯ, ಇಷ್ಟು ದಿನ ನಾವುಗಳು ಮಾಡಿದ್ದಕ್ಕಿಂತ ಈಗ ನೀನು ಮಾಡುತ್ತಿರುವುದೇ ಸರಿಯಾಗಿದೆ. ಇದನ್ನೇ ಮುಂದುವರೆಸು, ಯಾರಾದರೂ, ಏನಾದರೂ ಹೇಳಿದರೆ ನಾನು ಉತ್ತರ ಕೊಡುತ್ತೇನೆ,... ಹೌದು, ನೀನ್ಯಾಕೆ ನನ್ನ ಅಣ್ಣ ಅಂತ ಕರೆಯೋದು? ಕೆಲಸದಲ್ಲೇನೋ ನಾನು ನಿನಗಿಂತ ಸೀನಿಯರ್ ಇರಬಹುದು, ಆದರೆ ವಯಸ್ಸಿನಲ್ಲಿ ನೀನೇ ತಾನೆ ದೊಡ್ಡೋನು. ನಾನು ನಿನಗೆ ಕೆಲಸ ತೋರಿಸಿಕೊಟ್ಟೆ, ಅಂತ ವಿಶೇಷ ಮರ್ಯಾದೆ ಏನೂ ಬೇಡ. ಇನ್ಮುಂದೆ ಸದಾ ಅಂತ ಕರೀ ಸಾಕು".

ದಿನಗಳೆದಂತೆ ಸತ್ಯನಿಗೆ ಆತ್ಮೀಯ ಗೆಳೆಯ ನಾನಾದೆ. ಯಾವಾಗಲೂ ಅವನಿಗೆ ತನ್ನ ಮನೆಯ ವಿಷಯ ಹೇಳಿಕೊಳ್ಳಲು ಅತ್ಯುತ್ಸಾಹ. ವಾರಕ್ಕೊಮ್ಮೆ ತುಮಕೂರಿಗೆ ಹೋಗದೆ ಇರುತ್ತಿರಲಿಲ್ಲ. ಬರುವಾಗಲೆಲ್ಲ ರಾಶಿ ತಿಂಡಿ ಹೊತ್ತು ತರುತ್ತಿದ್ದ. ತಂದಿದ್ದರಲ್ಲಿ ಬಹಳಷ್ಟು ಭಾಗವನ್ನು ಕ್ಯಾಂಟೀನ್ ಹುಡುಗರಿಗೂ, ಕ್ಲೀನರ್ ಗಳಿಗೂ ಹಂಚಿಬಿಡುತ್ತಿದ್ದ. ಅಷ್ಟೇ ಅಲ್ಲ, ಅವರಿಗೆ ಗಣೇಶ, ದೀಪಾವಳಿಗಳಿಗೆ ಹೊಸಬಟ್ಟೆಗಳನ್ನೂ ತಂದುಕೊಡುತ್ತಿದ್ದ. ಅವರೆಲ್ಲರೂ ಸತ್ಯಣ್ಣ, ಸತ್ಯಣ್ಣ ಎಂದು ಅವನನ್ನು ಆದರಿಸುತ್ತಿದ್ದರು.

ಒಟ್ಟಿನಲ್ಲಿ, ಸಹೋದ್ಯೋಗಿಗಳಿಗೆ, ಮೇಲಧಿಕಾರಿಗಳಿಗೆ, ಕೆಳಗಿನವರಿಗೆ, ಎಲ್ಲರಿಗೂ ಸತ್ಯ ಅಚ್ಚುಮೆಚ್ಚಾಗಿ ಹೋದ. ನನಗೂ, ನನ್ನ ಕುಟುಂಬದವರಿಗೂ ಆಪ್ತನೂ ಆದ. ಅದೇ ರೀತಿ ನಾನು ಕೂಡ ಅವರ ಮನೆಯವರಿಗೆ ಚೆನ್ನಾಗಿ ಪರಿಚಿತನಾಗಿದ್ದೆ.

ಹೀಗೆ ಸುಮಾರು ನಾಲ್ಕೈದು ವರ್ಷಗಳು ಕಳೆದಿತ್ತು. ಒಮ್ಮೆ ಸತ್ಯನಿಗೆ ವಿಪರೀತ ಹುಷಾರು ತಪ್ಪಿದಾಗ, ಕೆಲಸಕ್ಕೂ ಬರೆದೆ, ಊರಿಗೂ ಹೋಗದೆ, ಯಾರಿಗೂ ಸರಿಯಾಗಿ ವಿಷಯ ತಿಳಿಯದೇ ಹೋಗಿತ್ತು. ಗಾಬರಿಯಾಗಿ ಊರಿನಿಂದ ಬಂದ ಅವನ ಅಪ್ಪ ಅಮ್ಮ, ಅವನ ಪರಿಸ್ಥಿತಿ ಕಂಡು ಹೆದರೇ ಬಿಟ್ಟರು. ಅಷ್ಟು ದಿನ ಅವನಿಗಾಗಿ ಪ್ರತ್ಯೇಕ ಮನೆಯನ್ನೇ ಮಾಡಿ, ಸಕಲ ಅನುಕೂಲಗಳೂ ಇರುವಂತೆ ವ್ಯವಸ್ಥೆ ಮಾಡಿದ್ದವರು, ಬೇರೇನಾದರೂ ದಾರಿ ಹುಡುಕುತ್ತಾ, ತಮ್ಮ ಸಂಬಂಧಿಕರ ಪೈಕಿ ಒಬ್ಬರನ್ನು ಸತ್ಯನ ಜೊತೆ ಇರುವಂತೆ ಏರ್ಪಾಡು ಮಾಡಿದರು

ಇದು ಸತ್ಯನ ಜೀವನವೇ ಬದಲಾಗಲು ಕಾರಣವಾಯಿತು.

****

ವಿಶ್ವನಾಥ, ಸತ್ಯನಿಗಿಂತ ಎರಡು ವರ್ಷ ದೊಡ್ಡವನು, ವಾರಿಗೆಯಲ್ಲಿ ಅಣ್ಣನೂ ಆಗಬೇಕು. ತುಂಬಾ ಓದಿ ಒಳ್ಳೆಯ ಕೆಲಸದಲ್ಲೂ ಇದ್ದ. ಸತ್ಯನಂತೂ, ವಿಶ್ವಣ್ಣ, ವಿಶ್ವಣ್ಣ ಎನ್ನುತ್ತಾ ಜಪ ಮಾಡುತ್ತಿದ್ದ. ಅವನ ಬುದ್ಧಿವಂತಿಕೆ, ಅವನ ಅಧಿಕಾರ, ಅವನ ಮೋಜು ಹೀಗೆ, ಅವನ ಮಾತಿನ ತುಂಬಾ ವಿಶ್ವನೇ ತುಂಬಿಹೋಗಿದ್ದ. ವಿಶ್ವಣ್ಣನಷ್ಟೇ ಅಲ್ಲ ಅವನ ಗೆಳೆಯರು ಸಹ ತನ್ನನ್ನು ತಮ್ಮನ ರೀತಿಯೇ ಕಾಣುತ್ತಾರೆಂದು ಹೆಮ್ಮೆ ಪಡುತ್ತಿದ್ದ.

ಅದರೊಂದಿಗೆ ಸತ್ಯನಲ್ಲೂ ಬದಲಾವಣೆ ಕಾಣಲಾರಂಭಿಸಿತ್ತು. ಎಲ್ಲರೊಡನೆ ಮಾತುಕತೆ ಕಡಿಮೆಯಾಗಿತ್ತು. ಕಚೇರಿಗೆ ಬರುವಾಗ ಹೋಗುವಾಗ, ಶೋಕಿಯಾಗಿರುವ ಬೇರೆ ಬಟ್ಟೆ ಧರಿಸುತ್ತಿದ್ದ, ಕೇಳಿದರೆ ವಿಶ್ವಣ್ಣ ಕೊಡಿಸಿದರು ಎನ್ನುತ್ತಿದ್ದ. ಮೊದಲಿದ್ದ ಮುಗ್ಧತೆಯ ಜಾಗದಲ್ಲಿ ನಿಧಾನವಾಗಿ ಚಾಲಾಕುತನ ತೋರತೊಡಗಿತ್ತು. ಮೊದಲೆಲ್ಲ ಕೆಲಸದ ನಂತರ ಯಾರಾದರೂ ಏನಾದರೂ ಸಹಾಯಕ್ಕೆಂದು ಕರೆದರೆ ಹಿಂದೆಮುಂದೆ ನೋಡದೆ ಹೋಗುತ್ತಿದ್ದವನು, ಈಗೆಲ್ಲಾ, ಕೆಲಸ ಮುಗಿದ ಕೂಡಲೇ ಮನೆಗೆ ಓಡುತ್ತಿದ್ದ.

ಎಲ್ಲಕ್ಕಿಂತ ಗಮನೀಯವಾಗಿ ಆದ ಬದಲಾವಣೆಯೆಂದರೆ, ವಾರಾಂತ್ಯಗಳಲ್ಲಿ ಊರಿಗೆ ಹೋಗುವುದನ್ನು ತಪ್ಪಿಸಲಾರಂಭಿಸಿದ್ದು. ಅದುವರೆವಿಗೂ ಅಷ್ಟಾಗಿ ಯೋಚಿಸದೆ ಇದ್ದ ನಾನು, ಈಗ ಸ್ವಲ್ಪ ಅನುಮಾನ ಪಡತೊಡಗಿದೆ. ಹಾಗೆ ಒಂದು ಸೋಮವಾರ ಸೂಕ್ಷ್ಮವಾಗಿ ಕೇಳಿಯೂ ಕೇಳಿದೆ, " ಏನೋ ಸತ್ಯ, ಹೇಗಿದ್ದಾರೆ ಅಮ್ಮ ಅಪ್ಪ, ಏನು ಸ್ಪೆಷಲ್ ಮಾಡಿ ಕಳಿಸಿದ್ದಾರೆ ಈ ವಾರ?".

ಮುಂದಿನ ಪುಟ ನೋಡಿ ...

ನನ್ನಿಂದ ಪ್ರಶ್ನೆಯನ್ನು ಎದುರು ನೋಡದಿದ್ದ ಸತ್ಯ, ಕೊಂಚ ಗಲಿಬಿಲಿಯಾದಂತೆ ಕಂಡು,

" ಇಲ್ಲ ಸದಾ, ಈ ವಾರ ಹೋಗೋಕೆ ಆಗ್ಲಿಲ್ಲ, ವಿಶ್ವಣ್ಣ ನಂದಿಬೆಟ್ಟಕ್ಕೆ ಕರೆದುಕೊಂಡು ಹೋಗಿದ್ದ. ಅಲ್ಲಾ, ಬೈಕಿನಲ್ಲಿ ಹಿಂದೆ ಕೂಡಿಸಿಕೊಂಡು ಹೋದ. ಎಷ್ಟು ಚೆನ್ನಾಗಿತ್ತು ಅಂತೀಯಾ? ಅವನ ಫ್ರೆಂಡ್ಸೆಲ್ಲಾ ಬಂದಿದ್ರು, ಬೆಳಗ್ಗೆಯಿಂದ ಸಂಜೆವರೆಗೂ ಅಲ್ಲೇ ಇದ್ವಿ. ರಾತ್ರಿ ಎಲ್ಲರೂ ನಮ್ಮ ಮನೆಗೇ ಬಂದಿದ್ರು. ಒಟ್ಟಿನಲ್ಲಿ, ತುಂಬ ಮಜವಾಗಿತ್ತು ಕಾಣೊ ಸದಾ". ಅವನ ಮಾತಿನಲ್ಲಿ ಊರಿಗೆ ಹೋಗುವುದು ತಪ್ಪಿತೆಂಬ ಚಿಂತೆಯ ಸುಳಿವೇ ಕಾಣಲಿಲ್ಲ. ಮತ್ತೆ ಮುಂದಿನ ವಾರ ಮೇಕೆದಾಟು, ಮತ್ತೊಮ್ಮೆ ಬನ್ನೇರಘಟ್ಟ, ಹೀಗೆ ಸುತ್ತುತ್ತಾ ನಾಲ್ಕೈದು ವಾರಗಳಾದರೂ ಊರಿನ ಕಡೆ ಹೋಗುವ ಚಿಂತೆ ಮಾಡುತ್ತಿರಲಿಲ್ಲ. ಮೊದಮೊದಲು ಅವನ ತಂದೆತಾಯಿಯರು ಗಾಬರಿಯಿಂದ ತಾವೇ ಓಡಿಬರುತ್ತಿದ್ದವರು, ನಿಧಾನವಾಗಿ ವಿಶ್ವನ ಮಾತುಗಳಿಗೆ ಮರುಳಾಗಿ ಸತ್ಯನನ್ನು ಅವನ ವಶಕ್ಕೇ ಒಪ್ಪಿಸಿಬಿಟ್ಟರು.

ಆದರೆ ಈ ಬದಲಾವಣೆಗಳು ಬಹಳ ದಿನ ಉಳಿಯಲಿಲ್ಲ. ಸತ್ಯ ಆಗಾಗ್ಗೆ ರಜಾ ತೆಗೆದುಕೊಳ್ಳುವುದು ಮಾಮೂಲಾಯಿತು. ಮತ್ತೆ ಕೆಲಸಕ್ಕೆ ಬಂದಾಗ, ಹುಷಾರು ತಪ್ಪಿದವನಂತೆ ನಿಶ್ಶಕ್ತನಾಗಿ, ಅನ್ಯಮನಸ್ಕನಾಗಿ ಇರುತ್ತಿದ್ದ. ಹಾಕುತ್ತಿದ್ದ ಶುಭ್ರ ಬಟ್ಟೆಗಳ ಜಾಗದಲ್ಲಿ, ಕೊಳೆಯಾದ, ಅಸ್ತವ್ಯಸ್ತ ಬಟ್ಟೆಗಳು ಕಾಣಲಾರಂಭಿಸಿತು. ಕೆಲಸದಲ್ಲೂ ಆಸಕ್ತಿ ಕಡಿಮೆಯಾಗಿತ್ತು. ಅಲ್ಲಲ್ಲಿ ಸಾಲ ಕೂಡ ಕೇಳಲಾರಂಭಿಸಿದ್ದ. ಒಮ್ಮೆ ನಾನೊಬ್ಬನೇ ಶನೇಶ್ವರನ ದೇವಾಲಯದ ಬಳಿ ಹೋದಾಗ, ನನ್ನ ಮುಖ ಪರಿಚಯವಿದ್ದ ಕೆಲವರು, " ಎಲ್ಲಿ ಸ್ವಾಮಿ, ನಿಮ್ಮ ಸ್ನೇಹಿತರು, ಊರ್ನಾಗಿಲ್ವ, ಅಥವಾ ಉಷಾರಿಲ್ವ. ಇತ್ಲಾಗೆ ಬಂದೇ ಇಲ್ಲ ಶಾನೆ ದಿನದಿಂದ", ಎಂದಿದ್ದರು.

ಅದಾದ ನಂತರದ ಶುಕ್ರವಾರ ಪೂಜೆಯ ಸಮಯದಲ್ಲಿ ಅವನನ್ನು ಗಮನಿಸುತ್ತಿದ್ದ. ಪೂಜೆಯನ್ನೇನೋ ಯಥಾಪ್ರಕಾರ ಮಾಡಿದ, ಆದರೆ ನಂತರ ಅವನ ಗಮನವೆಲ್ಲಾ, ಎಲ್ಲರೂ ತಟ್ಟೆಗೆ ಹಾಕುತ್ತಿದ್ದ ದುಡ್ಡಿನ ಮೇಲಿತ್ತು. ಯಾವಾಗಲೂ ಸಂಜೆ ಮನೆಗೆ ಹೋಗುವ ಮುನ್ನ ತಟ್ಟೆಯ ಹಣವನ್ನು ತೆಗದುಕೊಳ್ಳುತ್ತಿದ್ದವನು, ಇಂದು ಎಲ್ಲರೂ ಅಲ್ಲಿಂದ ಚೆದುರಿದ ಕೂಡಲೇ, ಹಣವನ್ನೆಲ್ಲಾ ತನ್ನ ಚೀಲಕ್ಕೆ ತುಂಬಿಕೊಂಡು, ತನ್ನ ಬೀರುವಿನಲ್ಲಿಟ್ಟು ಬೀಗ ಹಾಕಿದ.

ಶನಿವಾರ ಕೆಲಸದ ನಂತರ, " ಸತ್ಯ, ಇವತ್ತು ನಾನೂ ದೇವಸ್ಥಾನಕ್ಕೆ ಬರ್ತೀನಿ, ನಡಿ ಹೋಗೋಣ", ಎಂದೆ.

" ಪರವಾಗಿಲ್ಲ ಸದಾ, ನಾ ಹೋಗ್ಬರ್ತೀನಿ, ನಿನಗೆ ಸುಮ್ಮನೆ ತಡ ಆಗುತ್ತೆ".

" ತಡ ಏನಿಲ್ಲ, ನಾನೂ ಹೋಗಿ ತುಂಬಾ ದಿನ ಆಯ್ತು, ಬಾ ಒಟ್ಟಿಗೆ ಹೋಗೋಣ".

" ನಂಗೆ ಇವತ್ತು ಆಗಲ್ಲ ಸದಾ, ನಾನು ನಾಳೆ ಹೋಗ್ತೀನಿ ಬಿಡು".

" ನೋಡೋ, ಬರೀ ಸುಳ್ಳು ಹೇಳ್ಬೇಡ, ನೀನು ದೇವಸ್ಥಾನಕ್ಕೆ ಹೋಗಲ್ಲ, ಹೋಗಿ ತುಂಬಾ ದಿನಾನೆ ಆಗಿದೆ. ನಿಜ ಹೇಳು, ದುಡ್ದೆಲ್ಲಾ ಏನ್ಮಾಡ್ತಿದ್ದೀಯ? ಸಾಲಗಳ ಬೇರೆ ಕೇಳೋಕೆ ಶುರು ಮಾಡಿದ್ದೀಯ. ಏನಾಗ್ತಾ ಇದೆ ನಿಜ ಹೇಳು".

"ಅದೂ... ವಿಶ್ವಣ್ಣಂಗೆ ಹುಷಾರಿಲ್ಲ, ಅದಕ್ಕೆ ಡಾಕ್ಟ್ರ ಆಸ್ಪತ್ರೆ, ಅಂತ ಖರ್ಚು ಜಾಸ್ತಿ ಆಗ್ಬಿಟ್ಟಿದೆ. ಅದಕ್ಕೆ ಸದಾ ನಾನು ತುಂಬಾ ಒದ್ದಾಡ್ತಾ ಇದೀನಿ".

ನಾನು ಮತ್ತೆ ಮಾತು ಮುಂದುವರಿಸುವ ಮುನ್ನವೇ ಅಲ್ಲಿಂದ ಹೊರಟು ಹೋದ. ಅವನು ನನ್ನ ಕೈಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ ಎಂದು ನನಗೆ ಖಚಿತವಾಗಿತ್ತು.

ಹೀಗೆ ದಿನಗಳು ಉರುಳಿತ್ತು, ಸತ್ಯನ ಸ್ವಭಾವವೇ ಸಂಪೂರ್ಣ ಬದಲಾಯಿಸಿತ್ತು. ಎಲ್ಲರೂ ಅವನನ್ನು ದೂರ ಇಡಲಾರಂಭಿಸಿದ್ದರು. ಯಾವಾಗಲೂ ವಿಶ್ವಣ್ಣನಿಗೆ ಔಷಧಿ, ಎನ್ನುತ್ತಾ, ಎಲ್ಲರೂ ಬಳಿ ದುಡ್ಡಿಗಾಗಿ ಕೈ ಚಾಚುತ್ತಿದ್ದ.

ಒಮ್ಮೆ ಒಂದು ವಾರ ಪೂರ್ತಿ ಕೆಲಸಕ್ಕೆ ಬರಲಿಲ್ಲ. ಬಹುಶಃ ಆದರೆ ವಿಶ್ವನ ಆರೋಗ್ಯದಲ್ಲಿ ಏನೋ ಹೆಚ್ಚುಕಮ್ಮಿ ಆಗಿರಬಹುದು ಎಂದುಕೊಂಡೆ. ಇದುವರೆಗೂ ವಿಶ್ವನನ್ನು ಭೇಟಿ ಮಾಡಿರಲಿಲ್ಲ, ಈಗ ನೋಡಿದ ಹಾಗೂ ಆಗುತ್ತದೆ, ಅವನ ಆರೋಗ್ಯದ ವಿಷಯವೂ ತಿಳಿಯುತ್ತದೆ ಎಂದು ಸತ್ಯನ ಮನೆಗೆ ಒಂದು ಸಂಜೆ ಸತ್ಯನ ಮನೆಗೆ ಹೊರಟೆ.

ಅವನ ತಂದೆ ಸತ್ಯನಿಗೆಂದು ಸುಸಜ್ಜಿತವಾದ, ಎಲ್ಲಾ ಅನುಕೂಲಗಳೂ ಇರುವ ಒಂದು ಮನೆಯನ್ನೇ ಮಾಡಿಕೊಟ್ಟಿದ್ದರು. ಅವನೂ ಅದನ್ನು ಸ್ವಚ್ಛವಾಗಿ, ಒಪ್ಪ ಓರಣದಿಂದ ಇಟ್ಟುಕೊಂಡಿದ್ದ. ನಾನು ಹೋಗಿ ಸುಮಾರು ತಿಂಗಳುಗಳೇ, ಅಂದರೆ ವಿಶ್ವ ಬಂದ ಮೇಲೆ ಹೋಗೇ ಇರಲಿಲ್ಲ. ಅಂದು ಹೋದಾಗ ಮುಂಬಾಗಿಲು ತೆರೆದೇ ಇತ್ತು. ಸಮೀಪಿಸುತ್ತಿದ್ದಂತೆ, ಸಿಗರೇಟಿನ ದಟ್ಟ ಹೊಗೆ ಉಸಿರು ಕಟ್ಟಿಸಿ, ಹೆಜ್ಜೆ ಹಿಂದಿಡುವಂತಾಯ್ತು. ಒಳಗೆ ಎಲ್ಲೆಂದರಲ್ಲಿ ಬಿದ್ದಿದ್ದ ಬಟ್ಟೆಗಳು, ತಿಂಡಿ ತಿಂದು ಬಿಟ್ಟು ಒಣಗಿದ ತಟ್ಟೆ ಲೋಟಗಳು, ಸಿಗರೇಟಿನ ತುಂಡುಗಳು, ಒಟ್ಟಿನಲ್ಲಿ ಮನೆ ಅವ್ಯವಸ್ಥೆಯ ಗೂಡಾಗಿತ್ತು.

ಒಳಗಿನ ಕೋಣೆಗೆ ಹೋದೆ. ಒಂದು ಮಂಚದ ಮೇಲೆ ಸತ್ಯ ಮಲಗಿದ್ದ. ಮತ್ತೊಂದು ಮಂಚವಿದ್ದು ಅದರ ಮೇಲೆ ಇನ್ನೊಬ್ಬ ವ್ಯಕ್ತಿ ಮಲಗಿದ್ದ, ಬಹುಶಃ ವಿಶ್ವನೇ ಇರಬೇಕು. ಮೈಮೇಲೆ ಜ್ಞಾನವೇ ಇಲ್ಲದಂತೆ ಇಬ್ಬರೂ ಮಲಗಿದ್ದರು. ಕೋಣೆಯ ತುಂಬಾ ಮದ್ಯದ ಬಾಟಲಿಗಳು, ಚಿಪ್ಸ್ ಮತ್ತು ಸಿಗರೇಟ್ ಪ್ಯಾಕೆಟ್ ಗಳು ಹರಡಿದ್ದವು. ಸತ್ಯನ ಬಳಿ ಹೋದೆ, ಮೂಗು ಮುಚ್ಚಿಕೊಳ್ಳುವಂತಾಯ್ತು. ಸ್ನಾನ ಮಾಡಿ ಬಟ್ಟೆ ಬದಲಾಯಿಸಿ, ಯಾವ ಕಾಲವಾಯ್ತೋ ಎನ್ನುವಂತಿದ್ದ. ಮೂರ್ನಾಲ್ಕು ಸಲ ಜೋರಾಗಿ ಕೂಗಿದೆ, ಮೈಯನ್ನು ಅಲ್ಲಾಡಿಸಿದೆ, ಏಳಲಿಲ್ಲ.

ಮುಂದಿನ ಪುಟ ನೋಡಿ ...

ಅಷ್ಟರಲ್ಲಿ ಇನ್ನೊಂದು ಮಂಚದಲ್ಲಿ ಮಲಗಿದ್ದ ವಿಶ್ವ ಎದ್ದು ಕುಳಿತಿದ್ದ.
"ಏನಾಯ್ತು ಸತ್ಯನಿಗೆ", ಎಂದು ಕೇಳಿದೆ.
"ಸ್ವಲ್ಪ ಕುಡಿದದ್ದು ಹೆಚ್ಚಾಯ್ತು ಅನ್ಸುತ್ತೆ", ಎನ್ನುತ್ತಾ, ಗಹಗಹಿಸಿ ನಕ್ಕ.
"ಅವನು ಕೆಲ್ಸಕ್ಕೆ ಬಂದು ಒಂದು ವಾರ ಆಯ್ತು. ಯಾಕೆ, ಕಾರಣ ಕೂಡ ಕೊಟ್ಟಿಲ್ಲ. ಹೀಗಾದ್ರೆ ಕೆಲಸಕ್ಕೆ ತೊಂದ್ರೆ ಆಗಲ್ವ?", ತುಸು ಸಿಟ್ಟಿನಿಂದಲೇ ಕೇಳಿದೆ.
"ನಾನೇನ್ರೀ ಮಾಡೋಕ್ಕಾಗುತ್ತೆ, ನನ್ನನ್ನೇ ಮೀರಿಸೋ ತರ ಹೋಗ್ತಾ ಇದ್ದಾನೆ ನಿಮ್ಮ ಫ್ರೆಂಡು, ನಾನು ಸ್ವಲ್ಪ ರುಚಿ ತೋರಿಸ್ದೆ ಅಷ್ಟೇ. ಅವನೇ ಏನೇನೋ ಹೊಸ ಪ್ರಯೋಗಗಳನ್ನು ಮಾಡಿ ಯಾವ್ದೋ ಲೋಕಕ್ಕೆ ಹೋಗ್ಬರ್ತಾನೆ", ಎಂದು ಉಡಾಫೆಯ ಮಾತಾಡಿದ. ನನಗೆ ಅಲ್ಲಿ ನಿಲ್ಲಲೂ ಅಸಹ್ಯವಾಗಿ ಅಲ್ಲಿಂದ ಹೊರಟೆ.
"ರೀ ಸ್ವಾಮಿ, ನಿಮ್ಮ ಫ್ರೆಂಡ್ ಗೆ ಹುಷಾರಿಲ್ಲ ಅಂದ್ರೂ ಹಾಗೇ ಹೋಗ್ತೀರಲ್ಲ. ಡಾಕ್ಟರ್, ಔಷ್ಧಿ ಅಂತೆಲ್ಲಾ ಖರ್ಚಾಗುತ್ತೆ. ಏನಾದ್ರೂ ಸ್ವಲ್ಪ ದುಡ್ಡಿದ್ರೆ ಕೊಟ್ಟು ಹೋಗಿ", ನಾನು ಬಾಗಿಲಾಚೆ ನಡೆದರೂ, ಕೂಗಿ ಹೇಳಿದ ವಿಶ್ವ.

ಸತ್ಯನ ತಂದೆಗೆ ಕರೆ ಮಾಡಿ ವಿಷಯ ತಿಳಿಸಿದೆ. ಊರಿನಿಂದ ಓಡೋಡಿ ಬಂದವರು, ಹಾಗೆಯೇ ಕೂಡಲೇ ಸತ್ಯನನ್ನು ಊರಿಗೆ ಕರೆದುಕೊಂಡು ಹೋದರು. ನನಗೆ ಕರೆ ಮಾಡಿ, ಮಗನ ಬಗ್ಗೆ ಎಚ್ಚರ ತೆಗೆದುಕೊಂಡಿದ್ದಕ್ಕೆ ಧನ್ಯವಾದ ತಿಳಿಸಿ, ಒಂದು ತಿಂಗಳು ರಜೆ ಹಾಕಿಸಿ ಮತ್ತೆ ಕಳುಹಿಸುವುದಾಗಿ ಹೇಳಿದರು.

ಸತ್ಯ ತಿಂಗಳ ನಂತರ ಹಿಂದಿರುಗಿ ಬಂದ. ಮತ್ತೆ ಮೊದಲಿನಂತೆ ಕಂಡ. ನನಗೆ ಬಹಳವೇ ಸಂತೋಷವಾಯಿತು. ನನ್ನನ್ನು ಕೊಂಡಾಡಿದ. ‘‘ನೀನೇ ನನ್ನ ಪಾಲಿಗೆ ದೇವರಾದೆ ಸದೂ, ಆ ಪಾಪಿ ವಿಶ್ವನಾಥನ ಕೈಯಿಂದ ನನ್ನನ್ನು ಉಳಿಸಿದೆ. ನೀನು ಸಕಾಲದಲ್ಲಿ ನನ್ನ ಅಪ್ಪ ಅಮ್ಮಂಗೆ ಎಚ್ಚರಿಕೆ ಕೊಡ್ದೆ ಇದ್ದಿದ್ರೆ ನನ್ನ ಜೀವನಾನೆ ಹಾಳಾಗಿ ಹೋಗ್ತಿತ್ತು’’, ಎಂದು ಕಣ್ಣೀರು ಹಾಕಿದ.

‘‘ಹೋಗ್ಲಿ ಬಿಡು ಸತ್ಯ, ಏನೋ ಜೀವನದಲ್ಲಿ ನೀನು ಒಂದು ಪಾಠ ಕಲಿತಂತೆ ಆಯಿತು. ಸಧ್ಯ ಅಷ್ಟಕ್ಕೇ ಮುಗೀತಲ್ಲ, ಇನ್ಮೇಲಾದ್ರೂ ನಿಮ್ಮಪ್ಪ ಅಮ್ಮನ ಮನಸ್ಸಿಗೆ ಘಾಸಿಯಾಗದಂತೆ ಹುಷಾರಾಗಿರು’’, ಎಂದು ಸಮಾಧಾನದ ನಿಟ್ಟುಸಿರಿಟ್ಟೆ.

ಆದರೆ ಶೀಘ್ರದಲ್ಲೇ ಆ ನಿಟ್ಟುಸಿರು, ಮತ್ತೆ ಚಿಂತೆಯ ನಿಟ್ಟುಸಿರಾಗಿತ್ತು. ಸತ್ಯನಲ್ಲಿ ಮೊದಲಿನ ಗುಣಗಳೇ ಮತ್ತೆ ಕಂಡರೂ, ಈಗ ಅದೆಲ್ಲಾ ಬರೀ ನಾಟಕವಾಗಿತ್ತು. ಅವನು ಮೊದಲು ಸಂಪಾದಿಸಿದ್ದ ಒಳ್ಳೆಯ ಹೆಸರು ಸುಮಾರು ದಿನ ಎಲ್ಲರನ್ನೂ ಬುಟ್ಟಿಗೆ ಬೀಳಿಸಿಕೊಳ್ಳಲು ಸಹಾಯ ಮಾಡಿತ್ತು. ಆದರೆ ಮುಂಚೆ ಇದ್ದ ಮುಗ್ಧತೆ, ಪ್ರಾಮಾಣಿಕತನದ ಜಾಗವನ್ನು ಈಗ, ಕಪಟತನ ವಂಚನೆ ಆಕ್ರಮಿಸಿತ್ತು. ಅವನು ಏನೇ ಮಾಡಿದರೂ ತನಗೇನಾದರೂ ಅಲ್ಲಿ ಲಾಭವಿದೆಯೇ, ಮೋಸ ಮಾಡಲು ದಾರಿ ಇದೆಯೇ ಎಂದು ಹುಡುಕುತ್ತಿದ್ದ. ಆವನ ನಿಷ್ಕಪಟ ಮನಸ್ಸಿಗೆ ಸಂಪೂರ್ಣ ಹಾನಿಯಾಗಿ, ದುರ್ವ್ಯಸನಗಳಿಗೆ ನಿಧಾನವಾಗಿ ದಾಸನಾಗಿ ಹೋದ. ಸಾಧ್ಯವಿರುವೆಡೇಯೆಲ್ಲಾ ಮೋಸದ ಕೃತ್ಯಗಳೆಸಗಿ, ತನ್ನ ಕೆಲಸವನ್ನೂ ಕಳೆದುಕೊಂಡಿದ್ದ. ಕಡೆಗೆ ಅವನು ಎಲ್ಲಿದ್ದಾನೆ, ಏನು ಮಾಡುತ್ತಿದ್ದಾನೆ ಎನ್ನುವುದು ಎಲ್ಲರಿಗೂ ಒಂದು ಪ್ರಶ್ನೆಯಾಗಿ ಉಳಿಯಿತು.

****

‘‘ಸದೂ, ಎಲ್ಲಿ ಇಳಿಯೋಣ, ಮಲ್ಲೇಶ್ವರಂನಲ್ಲಾ, ಇಲ್ಲಾ ಸಿಟಿ ಸ್ಟೇಷನಲ್ಲಿನಾ,’’ ಅಮ್ಮ ಕೇಳಿದಾಗ, ನೆನಪುಗಳ ಲೋಕದಿಂದಾಚೆ ಬಂದೆ. ರೈಲು ಯಶವಂತಪುರದಲ್ಲಿ ನಿಂತಿತ್ತು.

‘‘ಮಲ್ಲೇಶರದಲ್ಲೇ ಇಳಿದು ಆಟೋದಲ್ಲಿ ಹೋಗೋಣಮ್ಮ’’, ಎಂದೆ.

ಮನೆಗೆ ಬರುವ ವೇಳೆಗೆ ಊರಿನಿಂದ ಅಕ್ಕ ಬಂದಿದ್ದರು, ಭಾವನ ಕೆಲಸ ದೂರದ ಊರಿನಲ್ಲಾದ್ದರಿಂದ, ಈ ನಡುವೆ ಅಕ್ಕ ಬಂದೇ ಇರಲಿಲ್ಲ. ಕುಶಲೋಪರಿಗಳು ಮುಗಿದು ಊಟಕ್ಕೆ ಕುಳಿತಾಗ ಅಕ್ಕ ಇದ್ದಕ್ಕಿದ್ದಂತೆ ನೆನಪಿಸಿಕೊಂಡು ಹೇಳಿದರು ‘‘ಸದಾ, ಇವತ್ತು ಮೆಜೆಸ್ಟಿಕ್ ಬಸ್ಟ್ಯಾಂಡ್ ನಲ್ಲಿ ನಿನ್ನ ಸ್ನೇಹಿತ ಸಿಕ್ಕಿದ್ದ ಕಾಣೋ’’.
‘‘ಯಾರಕ್ಕಾ ಅದು?’’
‘‘ಅದೇ, ನಮ್ಮ ಪುಟ್ಟಿ ಹುಟ್ಟಿದಾಗ ಬಂದಿದ್ದ ನೋಡು, ಬಹುಶಃ ಸತ್ಯ ಇರಬೇಕು ಅವನ ಹೆಸರು, ಅಲ್ವಾ?’
‘‘ಸತ್ಯಾನಾ? ಅವನೇ ಅಂತ ಖಂಡಿತಾನಾ? ಯಾವಾಗ ನೋಡ್ದೆ?’’ ಮೆಟ್ಟಿಬಿದ್ದು ಕೇಳಿದೆ.
‘‘ಖಂಡಿತ ಅವನೇ, ಅದೇ ತರ ಮಾತನಾಡಿಸಿದ, ಪುಟ್ಟಿ ಎಷ್ಟು ದೊಡ್ಡೋಳಾಗ್ಬಿಟ್ಟಿದ್ದಾಳೆ ಅಂತ ಕೂಡ ಹೇಳ್ದಾ..., ಪ್ಚ್ ಆದ್ರೆ ಪಾಪ ಎಷ್ಟು ಇಳಿದು ಹೋಗಿದಾನಲ್ವ? ತುಂಬಾನೇ ಪಾಪ ಅನ್ನುಸ್ತು’’.

ಮುಂದಿನ ಪುಟ ನೋಡಿ ...

“ಹ್ಞೂ, ಅನ್ಸುತ್ತೆ, ಅನ್ಸುತ್ತೆ, ಎಲ್ಲಾ ಬಿಟ್ಟು ನಿನ್ನ ಕಣ್ಣಿಗೆ ಕಾಣ್ಸಿದ್ದಾನಲ್ಲ ಅವನು”.

“ಯಾಕೋ ಹಾಗಂತೀಯಾ, ನಿನ್ನನ್ನೇ ಹುಡ್ಕೊಂಡು ಹೋಗ್ತಿದ್ನಂತೆ, “ಅಕ್ಕಾ ನೀವು ಸಿಕ್ಕಿದ್ದು ಒಳ್ಳೇದಾಯ್ತು, ಇಲ್ಲಾ ಅಂದ್ರೆ ಇವತ್ತು ನನ್ನ ದೇವ್ರೆ ಕಾಪಾಡ್ಬೇಕಿತ್ತು”, ಅಂತ ಬಿಕ್ಕಿ ಬಿಲ್ಲಿ ಅತ್ಬುಟ್ಟ”.

“ಯಾಕೋ, ಅಂತಾದ್ದೇನಾಯ್ತಂತೆ ಅವನಿಗೆ”.

“ಇವತ್ತು ಬೆಳಗ್ಗೆ ಊರಿಂದ ಫೋನ್ ಬಂತಂತೆ, ಅವರ ತಂದೆಗೆ ಹಾರ್ಟ್ ಅಟ್ಯಾಕ್ ಆಗಿ ತುಂಬಾ ಸೀರಿಯಸ್ ಆಗಿದ್ದಾರೆ, ತಕ್ಷಣ ಬಾ, ಈಗ್ಲೋ ಆಗ್ಲೋ ಅನ್ನೋ ಹಾಗಿದ್ದಾರೆ ಅಂತ”, ಎದ್ನೋ ಬಿದ್ನೋ ಅಂತ ಮೆಜೆಸ್ಟಿಕ್ ಗೆ ಓಡಿ ಬಂದ್ನಂತೆ. ಬಸ್ ಸಿಕ್ಕಿದ್ರೆ ಸರಿ ಇಲ್ಲಾಂದ್ರೆ ಟ್ಯಾಕ್ಸಿಲೇ ತುಮಕೂರಿಗೆ ಹೋಗೋಣ ಅಂದ್ಕೊಂಡ್ ಬಂದ್ರೆ ಅವನ ಗ್ರಹಚಾರಕ್ಕೆ ಯಾರೋ ಅವನ ಜೇಬನ್ನೇ ಕತ್ತರಿಸಿ ಬಿಡೊದೆ, ಪಾಪ, ಆ ಕತ್ತರಿಸಿರೋ ಜೇಬನ್ನೂ ತೋರಿಸಿದ”.

ನನಗೆ ಮಧ್ಯಾನ್ಹ ನನ್ನೊಡನೆ “ಯಾಕಾದ್ರೂ ನಮ್ಮ ವಂಶದಲ್ಲಿ ಇಂತಹವನು ಹುಟ್ಟಿದನೋ” ಎನ್ನುತ್ತಿದ್ದ ಅವರ ತಂದೆಯ ಮುಖ ಕಣ್ಣ ಮುಂದೆ ಬಂತು. ಅಮ್ಮ ನಂಬಲಸಾಧ್ಯವಾದಂತೆ ನನ್ನನ್ನೇ ನೋಡುತ್ತಿದ್ದರು.

“ಯಾವಾಗಂತೆ ಅವರ ತಂದೆಗೆ ಹಾಗೆ ಆಗಿದ್ದು”, ಶಾಂತವಾಗಿ ಕೇಳಿದೆ.

“ಇವತ್ತು ಬೆಳಗ್ಗೆ, ಬೆಳಗ್ಗೇನೆ ಅಂತೆ ಕಾಣೋ, ಸುಮಾರು ಹೊತ್ನಿಂದ ಸಹಾಯಕ್ಕೆ ಅವರಿವರ ಹತ್ರ ಕೇಳ್ತಿದ್ನಂತೆ. ಈಗಿನ ಕಾಲ್ದಲ್ಲಿ ಮೋಸ ಮಾಡೋರೇ ಜಾಸ್ತಿ ಆಗಿ, ಇಂತೋರ್ನ ಯಾರು ನಂಬ್ತಾರೆ ಹೇಳು”?

“ ಅದೆಲ್ಲಾ ಇರ್ಲಿ, ಆಮೇಲೆ ಏನಾಯ್ತು ಹೇಳು”.

“ಬಸ್ಸೂ, ರೈಲೂ ಅಂತಾ ಕಾಯ್ತಾ ಕೂತ್ಕೋ ಬೇಡಪ್ಪಾ, ಟ್ಯಾಕ್ಸೀಲೆ ಹೋಗು ಅಂತ ಹೇಳಿ ಒಂದು ಸಾವಿರ ರೂಪಾಯಿ ಅವನಿಗೆ ಕೊಟ್ಟೆ. ಪಾಪ, ಬೇಡಕ್ಕ, ಬೇಡಕ್ಕ ಅಂತ ತುಂಬಾ ಸಂಕೋಚದಿಂದಾನೇ ತೊಗೊಂಡ, ನಿಮ್ಮ ತಮ್ಮನ ಕೈಗೆ ಕೊಟ್ಟು ನಿಮಗೆ ವಾಪಸ ತಲುಪಿಸುತ್ತೀನಿ ಅಂತ ಹೇಳಿದ. ಅದರ ಬಗ್ಗೆ ಆಮೇಲೆ ಯೋಚ್ನೆ ಮಾಡೂವಂತೆ, ಮೊದಲು ಯಾವುದಾದ್ರು ಟ್ಯಾಕ್ಸಿ ಸಿಗುತ್ತಾ ನೋಡು ಅಂದ್ಮೇಲೆ, ಟ್ಯಾಕ್ಸಿ ಸ್ಟ್ಯಾಂಡ್ ಕಡೆಗೆ ಎದ್ನೋ, ಬಿದ್ನೋ ಅಂತ ಓಡ್ದ”.

****

ಹೇಳಿ ಇವಾಗ, ನಿಮಗೇನಾದ್ರೂ ಈ ಸತ್ಯ ಗೊತ್ತಾ, ಅಕಸ್ಮಾತ್ ಎಲ್ಲಿದ್ದಾನೆ ಗೊತ್ತಾ ಅಂತ. ಒಂದು ವಿಷಯ, ನಿಮಗೆ ಗೊತ್ತಿದ್ರೆ, ನನಗೆ ತಿಳಿಸ್ದೆ ಇದ್ರೂ ಪರವಾಗಿಲ್ಲ, ನೀವು ಮಾತ್ರ ಹುಷಾರಾಗಿರಿ. ▪

ಕರ್ನಾಟಕದ ಪ್ರಮುಖ ಬೆಳೆಗಳು / ಬೆಳೆಯುವ ಸ್ಥಳ

ಕನ್ನಡ ಮತ್ತು ಕರ್ನಾಟಕದ ವಿಶೇಷಗಳು

ಭತ್ತ	ರಾಯಚೂರು,ಬಳ್ಳಾರಿ,ಚಿತ್ರದುರ್ಗ,ಮಂಡ್ಯ, ಮೈಸೂರು, ಹಾಸನ, ಶಿವಮೊಗ್ಗ ಚಿಕ್ಕಮಗಳೂರು,ಕೊಡಗು,ಧಾರವಾಡ,ಉಡುಪಿ, ದ.ಕನ್ನಡ,ಉ.ಕನ್ನಡ, ಬೆಳಗಾವಿ
ರಾಗಿ	ಮಂಡ್ಯ, ಮೈಸೂರು,ಹಾಸನ ಕೋಲಾರ,ತುಮಕೂರು,ದಾವಣಗೆರೆ, ಚಿತ್ರದುರ್ಗ,ಚಾಮರಾಜನಗರ, ರಾಮನಗರ, ಚಿಕ್ಕಬಳ್ಳಾಪುರ
ಜೋಳ	ರಾಯಚೂರು,ಬಳ್ಳಾರಿ,ಚಿತ್ರದುರ್ಗ,ಧಾರವಾಡ, ಗುಲ್ಬರ್ಗ,ಬೀದರ್,ಬಿಜಾಪುರ
ಗೋಧಿ	ಧಾರವಾಡ, ಗುಲ್ಬರ್ಗ,ಬೀದರ್,ಬಿಜಾಪುರ, ರಾಯಚೂರು, ಬೆಳಗಾವಿ
ಕಬ್ಬು	ಮೈಸೂರು, ಮಂಡ್ಯ, ಬಿಜಾಪುರ,ಬೆಳಗಾವಿ
ಹತ್ತಿ	ಮೈಸೂರು,ಚಾಮರಾಜನಗರ,ಶಿವಮೊಗ್ಗ, ದಾವಣಗೆರೆ, ಧಾರವಾಡ, ಬಿಜಾಪುರ, ರಾಯಚೂರು, ಬೆಳಗಾವಿ,ಚಿತ್ರದುರ್ಗ
ತಂಬಾಕು	ಮೈಸೂರು, ಮಂಡ್ಯ, ರಾಯಚೂರು, ಧಾರವಾಡ, ರಾಯಚೂರು, ಬೆಳಗಾವಿ,ಬಳ್ಳಾರಿ,ಚಿತ್ರದುರ್ಗ,ಹಾಸನ, ಕೋಲಾರ ತುಮಕೂರು,ಚಿಕ್ಕಮಗಳೂರು

ನೀವು ಮಾಡಿ

ಊಟದಲ್ಲಿ ಕಬ್ಬಿಣಾಂಶ

ಸಂಕಲನ: ಬದರಿ ತ್ಯಾಮಗೊಂಡ್ಲು

ನಮ್ಮ ದಿನನಿತ್ಯದ ಊಟದ ಪದಾರ್ಥಗಳಲ್ಲಿ ಕಬ್ಬಿಣಾಂಶ ಇರುವುದು ನಮಗೆ ಗೊತ್ತಿರುವ ವಿಷಯವೇ. ಅದನ್ನು ಕಣ್ಣಾರೆ ಕಾಣುವ ಉಪಾಯ ಈ ಪ್ರಯೋಗದ್ದು.

ಬೇಕಾಗುವ ಸಾಮಾನು:

ಬ್ರೇಕ್ ಫಾಸ್ಟ್ ಸೀರಿಯಲ್ (ಕೆಲ್ಲೋಗ್, ನ್ಯೂಟ್ರೀ ಗ್ರೇನ್ ತರಹ ಹೆಚ್ಚು ಕಬ್ಬಿಣಾಂಶ ಇರುವ ಸೀರಿಯಲ್)

ಒಂದು ಬಿಳಿ ಬಲೂನ್, ಒಂದು ಮ್ಯಾಗ್ನೆಟ್, ಒಂದು ಪಾತ್ರೆ, ಸ್ವಲ್ಪ ನೀರು

ವಿಧಾನ

ಸೀರಿಯಲ್ ಅನ್ನು ಮಿಕ್ಸರ್ ನಲ್ಲಿ ಪುಡಿ ಮಾಡಿ ನೀರಿನೊಂದಿಗೆ ಚೆನ್ನಾಗಿ ಬೆರೆಸಿರಿ.

ಒಂದು ಪಾತ್ರೆಯಲ್ಲಿ ಹಾಕಿ ತಳ ಸೇರಲು ೧೦-೧೫ ನಿಮಿಷ ಕಾಯಿರಿ

ಈಗ ಬಲೂನ್ ಒಳಗಡೆ ಮ್ಯಾಗ್ನೆಟ್ ಸೇರಿಸಿ ದಾರದಿಂದ ಅದರ ಮೂತಿಯನ್ನು ಚೆನ್ನಾಗಿ ಬಿಗಿಯಿರಿ.

ಬಿಗಿದ ಬಲೂನ್ ಅನ್ನು ಪಾತ್ರೆಯಲ್ಲಿ ಹಾಕಿ ಅತ್ತಿಂದಿತ್ತ ಓಡಾಡಿಸಿರಿ

(ಸುಮಾರು ಒಂದೈದು ನಿಮಿಷವಾದರೂ ಮಾಡಬೇಕು)

ನಂತರ ತೆಗೆದು ನೋಡಿದರೆ, ಬಿಳಿ ಬಲೂನ್ ಮೇಲೆ ಕಬ್ಬಿಣದ ಸಣ್ಣ ಸಣ್ಣ ಪುಡಿ ಶೇಖರಣೆ ಆಗಿರುವುದು ಕಾಣಿಸುತ್ತದೆ.

ದೇಹಕ್ಕೆ ಅವಶ್ಯಕ ಖನಿಜಗಳಲ್ಲಿ ಒಂದಾದ ಕಬ್ಬಿಣವು ತಿನ್ನುವ ಪದಾರ್ಥದಲ್ಲಿ ಯಾವ ರೂಪದಲ್ಲಿರುತ್ತದೆ ಎಂದು ತಿಳಿದಿರಿ.

ಜಾಣ ಕರ್ನಾಟಕ – ಉತ್ತರ

೧. ೮೩ ನೆಯ ಸಾಹಿತ್ಯ ಸಮ್ಮೇಳನ, ಮೈಸೂರಿನಲ್ಲಿ ನಡೆಯಿತು.

೨. ಪ್ರೊ. ಚಂದ್ರಶೇಖರ ಪಾಟೀಲ, ಡಾ. ಮನು ಬಳಿಗಾರ್.

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಸಿಡ್ನಿ ಕನ್ನಡ ಶಾಲೆಯ ವಾರ್ಷಿಕೋತ್ಸವ

೧೬-೧೨-೨೦೧೨

ಸಂಜೆ ೩ - ೫

ವ್ಯಾಟಲ್ ಗ್ರೂವ್ ಪಬ್ಲಿಕ್ ಸ್ಕೂಲ್
ಕ್ರಸ್ ಬ್ರೂಕ್ ಡ್ರೈವ್,
ಎನ್. ಎಸ್. ಡಬ್ಲ್ಯೂ - ೨೧೬೩
ಮಾಹಿತಿಗೆ ಇಮೇಲ್ ಮಾಡಿ - SUGAMAKANNADA@GMAIL.COM

ಕನಕ ನಮನ

೧೭-೧೨-೨೦೧೨ ಬೆಳಿಗ್ಗೆ ೧೦:೩೦ ಕ್ಕೆ

ಹಾಡಲು ಇಚ್ಛಿಸುವರು ಇಮೇಲ್ ಮಾಡಿ

sugamakannada@gmail.com

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.